## ಉ.ಕ. ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನದ ವ್ಯಾಪ್ತಿ ಹಾಗೂ ಸ್ವರೂಪ ಕುರಿತ ಕಾರ್ಯಾಗಾರಕ್ಕೆಆಹ್ವಾನ

ಇವರಿಗೆ, ಶ್ರೀ ಪಾಂಡುರಂಗ ಹೆಗಡೆ

ಸನ್ಮಾನ್ಯರೇ, ವಂದನೆಗಳು,

ತಮ್ಮನ್ನು ತಜ್ಞರ ಸಮಾಲೋಚನಾ ಕಾರ್ಯಾಗಾರಕ್ಕೆ ಶಿರಸಿಗೆ ಆಹ್ವಾನಿಸಲು ಸಂತೋಷವಾಗುತ್ತಿದೆ.

**ಉದ್ದೇಶ :** ಉ.ಕ. ಜಿಲ್ಲೆಯ ಜೀವವೈವಿಧ್ಯ ಅನನ್ಯವಾದದ್ದು. ತಾವು ಉ.ಕ. ಜಿಲ್ಲೆಯ ಪರಿಸರ-ಅರಣ್ಯ-ಜೀವ ಸಂಕುಲದ ಅಧ್ಯಯನ ಮಾಡಿರುವುದರಿಂದ ಈ ವಿಷಯದ ಮಹತ್ವದ ಅರಿವಿದೆ.

ಪ್ರಸ್ತುತ ಬೃಹತ್ ಯೋಜನೆಗಳು ಜಿಲ್ಲೆಯಲ್ಲಿ ಸ್ಥಾಪನೆ ಆಗಿವೆ. ಇನ್ನಷ್ಟು ಭಾರೀ ಯೋಜನೆಗಳ ಪ್ರಸ್ತಾಪ ಆಗುತ್ತಿದೆ. ಅಷ್ಟೇ ವ್ಯಾಪಕವಾಗಿ ಪರಿಸರ ಚಳುವಳಿಗಳು ನಿರಂತರ ನಡೆದಿವೆ. ಈ ಎಲ್ಲ ಸಂದರ್ಭಗಳಲ್ಲಿ ಪುನಃ ಪುನಃ ವ್ಯಕ್ತವಾಗಿರುವ ಅಭಿಪ್ರಾಯ ಎಂದರೆ ಉ.ಕ. ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನವಾಗಬೇಕು.

ಜಿಲ್ಲೆಯಲ್ಲಿ ಈವರೆಗೆ ಬೃಹತ್ ಯೋಜನೆಗಳಿಂದ ಹಾಗೂ ಇತರ ಕಾರಣಗಳಿಂದ ಆಗಿರುವ ಪರಿಸರ ಹಾನಿ ಎಷ್ಟು? ಯಾವೆಲ್ಲ ಪ್ರಭೇದಗಳು ಮಾಯವಾಗಿವೆ? ಭೂಧಾರಣಾ ಸಾಮರ್ಥ್ಯ ಎಷ್ಟಿದೆ? ಬೃಹತ್ ಆಣೆಕಟ್ಟು, ಗಣಿಗಾರಿಕೆ ಅಥವಾ ಭಾರೀ ಕಾರ್ಖಾನೆಗಳನ್ನು ಉ.ಕ. ಜಿಲ್ಲೆಯಲ್ಲಿ ಸ್ಥಾಪಿಸಲು ಜಿಲ್ಲೆಯ ಪರಿಸರ ಅನುಮತಿ ನೀಡೀತೆ? ನದೀ ಜೋಡಣೆಯಿಂದ ಜಿಲ್ಲೆಗೆ ಹಾನಿಯೇ? ಲಾಭವೇ? ಉಷ್ಣಸ್ಥಾವರಗಳು ಬಂದರೆ ಕರಾವಳಿ, ಪಶ್ಚಿಮ ಘಟ್ಟದ ಮೇಲೆ ಏನೆಲ್ಲ ದುಷ್ಪರಿಣಾಮಗಳು? ಸೂಕ್ಷ್ಮ ಪರಿಸರ ಪ್ರದೇಶ ಎಂದು ಯಾವುದನ್ನು ಘೋಷಿಸಬೇಕು. ಜೈವಿಕ ತಾಣ ಎಂದು ಇಡೀ ಜಿಲ್ಲೆಯನ್ನು ಗುರುತಿಸಬೇಕೆ? ಈವರೆಗೆ ನಡೆದಿರುವ ಪರಿಸರ ಅಧ್ಯಯನಗಳು ಯಾವವು? ಕರಾವಳಿ-ಘಟ್ಟದ-ಜಲ ಸಂಬಂಧೀ ಪರಿಸ್ಥಿತಿ ಹೇಗಿದೆ? ಅರಣ್ಯ ಅಭಿವೃದ್ಧಿ, ವನೀಕರಣ ಹೇಗಿರಬೇಕು? ಹೀಗೆ ಹಲವು ಪ್ರಶ್ನೆಗಳು, ಚರ್ಚೆಗಳಿಗೆ ಉತ್ತರ ಕಂಡು ಕೊಳ್ಳಬೇಕಿದೆ. ಈ ಮೇಲಿನ ಇಷ್ಟೆಲ್ಲಾ ಅಂಶಗಳು ಹಾಗೂ ಇನ್ನೂ ಹಲವು ಮಹತ್ವದ ವಿಷಯಗಳ ಹಿನ್ನೆಲೆಯಲ್ಲಿ ಉ.ಕ. ಜಿಲ್ಲೆಯ ಅರಣ್ಯ ಜೀವವೈವಿಧ್ಯ ಪರಿಸರದ ಅಧ್ಯಯನ ಕೈಗೊಳ್ಳಬೇಕು. ಈ ಕುರಿತು ತಜ್ಞರು, ಪರಿಸರ ಸಂಶೋಧನಾ ಸಂಸ್ಥೆಗಳು, ಪರಿಸರಾಸಕ್ತ ಸಂಸ್ಥೆಗಳು, ಪರಿಸರ-ಅರಣ್ಯ ಅಧಿಕಾರಿಗಳು ಒಟ್ಟಿಗೆ ಸೇರಿ ಸಮಾಲೋಚಿಸಬೇಕಿದೆ.

**ಸೆಪ್ಟೆಂಬರ್ 13 ಶನಿವಾರ ಶಿರಸಿಯ ಸಹ್ಯಾದ್ರಿ ಕಾಲೋನಿಯಲ್ಲಿರುವ ಅರಣ್ಯ ವಿಶ್ರಾಂತಿ ಗೃಹದಲ್ಲಿ ಬೆಳಿಗ್ಗೆ 9-30 ರಿಂದ ಸಂಜೆವರೆಗೆ ಒಂದು ದಿನದ ತಜ್ಞ ಸಮಾಲೋಚನೆ ನಡೆಸೋಣ.** ಸೆಪ್ಟೆಂಬರ್ 13 ರಂದು ವ್ಯಕ್ತವಾಗುವ ಅಭಿಪ್ರಾಯ ಹಾಗೂ ಮಂಡಿಸಲ್ಪಡುವ ಲೇಖನಗಳನ್ನಾಧರಿಸಿ ಉ.ಕ. ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನ ಸ್ವರೂಪ-ವ್ಯಾಪ್ತಿ ನಿರ್ಧರಿಸೋಣ, ಚಿಕ್ಕ ಹಿನ್ನೆಲೆ ಲೇಖನ ಜೊತೆಗೆ ಇಡಲಾಗಿದೆ. ತಾವು ಮಂಡಿಸುವ ಅಭಿಪ್ರಾಯಗಳನ್ನು ಲೇಖನ ರೂಪದಲ್ಲಿ ತಯಾರಿಸಿ ತರಬೇಕಾಗಿ ಬಿನ್ನಹ.

ಇನ್ನೊಮ್ಮೆ ತಮ್ಮನ್ನು ಆಹ್ವಾನಿಸುತ್ತಿದ್ದೇವೆ.

ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ, ವೃಕ್ಷಲಕ್ಷ ಆಂದೋಲನ, ಅರಣ್ಯ ಇಲಾಖೆ ಸಹಕಾರದಲ್ಲಿ ಕಾರ್ಯಾಗಾರ ನಡೆಯಲಿದೆ. ತಮ್ಮ ಪ್ರವಾಸ ವೆಚ್ಚ ಭರಿಸಲಾಗುತ್ತದೆ. ಕಾರ್ಯಾಗಾರದಲ್ಲಿ 25 ತಜ್ಞಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

**ಸಂಪರ್ಕ ವಿಳಾಸ :** 1) ಶ್ರೀ ಪಿ.ಆರ್. ಭಟ್, ಪರಿಸರ ಅಧ್ಯಯನ ಕೇಂದ್ರ ಆಯ್.ಆಯ್.ಎಸ್.ಸಿ. ಶಿರಸಿ ಫೋನ್:9448570888. 2) ಶ್ರೀ ಬಾಲಚಂದ್ರ ಸಾಯಿಮನೆವನ್ಯಜೀವಿಅಧ್ಯಯನಕಾರರು ಫೋನ್: 08389-249478(ಮನೆ) blhegde@gmail.com.

ತಮ್ಮ ವಿಶ್ವಾಸಿ,

ಅನಂತ

1-09-2008.

ಅನಂತ ಹೆಗಡೆ ಅಶೀಸರ
ಕಾರ್ಯದರ್ಶಿ ಬೇಡ್ತಿ ಅಘನಾಶಿನಿಕೊಳ್ಳ ಸಂರಕ್ಷಣಾ ಸಮಿತಿ.
ಹಾಗೂ ಮುಖ್ಯ ಸಂಯೋಜಕರು, ವೃಕ್ಷಲಕ್ಷ ಆಂದೋಲನ.

One Day workshop on

**Building framework for studying carrying capacity of *Uttara Kannada* district**

None can dispute over the ecological and socio economic significance of *Western Ghats* (SAHYADRI) and Coastal region in Karnataka. However, these biogeographic regions are being constantly destroyed and degraded over the years. Reasons may be many, but the lack of proper conservation and developmental plan for these ecologically unique regions emerges out as the major one. While industrialization, expansion of agriculture and urbanization taking place with rapid speed all over the country, the same is being imposed in the region by the state without looking their long term negative impacts. Though Environmental Impact Assessment (EIA) for any given major project is mandatory as per the Environment Protection Act, 1986, often such studies end up paving the way for the project itself! It is ironical to see that hundreds of different developmental projects, which have been thorough such test over the last decade in *Sahydri* region, have ultimately caused huge damage to the environment and people. There is an urgent need, therefore, of redefining the objective and methodologies of such Environment Impact Assessment studies keeping the larger ecosystem and long term impacts in mind.

Such an effort is being planed in Uttara Kannada now. Having both Saydri and coastal regions along with deccan pleatue region, this district is known for its richness in natural resources. Even after having so many mega developmental projects like hydel dams and nuclear power stations, this ecologically sensitive region is being further subjected to further damage. Having experienced the lacuna of EIA procedure, which looks at the project in very minute scale and limited focus, we are badly in need of developieng an alternative frame work for assessing the impacts of any developmental project that require habitat alteration, keeping the ecology & socio-economic sustainability of the region in long run. Therefore, this workshop is being organized for design such a framework for the district. That will not only help to unearth the limitations of EIA of developmental projects, would also lay guidelines for taking up conservation and sustainable development works in the region in long run. Thus, this workshop is intended to generate such a benchmark for policy framing process in order to govern the developmental issues in the district. Such model can

later be extrapolated/extended/modified to the other regions of Karnataka also so that a larger alternative developmental plan can be evolved.

**The possible themes (Tentative):**

1. The landscape ecology and their role in ecological services.
2. Biodiversity & its socio-economic significance ( non tangible resources like medicinal plants, wild variants of crop plants, birds, insects, mammals and so on)
3. Natural resources and their socio-economic significance (relatively tangible resources like MFP, minerals, timber, sand, etc.)
4. Traditional agriculture practices., products and their socio-ecological significance
5. Traditional fishery practices., products and their socio-ecological significance
6. Economic value of traditional lifestyle, skills & value systems.( For instance, culture specific ecofriendly practices, use of local & biodegradable resource etc.)
7. Theoretical lacuna in present EIA of developmental projects and need of alternative framework ( Apart form the implementing level faults/corruptions etc. )
8. Scope for alternative development plans in the district which are ecologically sustainable, economically viable and socially equitable.( In-land fisheries, medicinal pant farming, intensive horticticulture, value addition agriculture etc.)
9. Possibilities of having the alternative plans for energy production (Wind/ Solar/ biogas etc.)

888888

# ಭಾರತದ ನದಿಗಳ ಒಕ್ಕೂಟ ಮತ್ತು ಪಶ್ಚಿಮಘಟ್ಟ ಉಳಿಸಿ ಅಭಿಯಾನ

ಪ್ರಕೃತಿ, ಹುಲೆಮಳಗಿ ಕಟ್ಟಡ, ಚೌಕಿಮಠ, ಶಿರಸಿ, 581401. ಫೋ 08384-225139.


ಪ.ಸಂ.116/2008/09 ದಿನಾಂಕ: 25-11-2008

# ಕರ್ನಾಟಕದ ನದಿಗಳು ಮತ್ತು ಪಶ್ಚಿಮಘಟ್ಟದ ಅವಲೋಕನ.

ಮಾನ್ಯರೆ,

ವಿಷಯ: ದಿನಾಂಕ 27ಮತ್ತು28 ಡಿಸೆಂಬರ್ ನಲ್ಲಿ ನಡೆಯು ಕಾರ್ಯಾಗಾರದ ಆಹ್ವಾನ.

ಭಾರತದ ನದಿಗಳ ಒಕ್ಕೂಟ 58ಕ್ಕೂ ಹೆಚ್ಚು ನದಿಗಳ ಕೊಳ್ಳಗಳಲ್ಲಿ ತಮ್ಮ ನದಿಗಳನ್ನು ಜೀವಂತ ಉಳಿಸಿಕೊಳ್ಳುವಲ್ಲಿ ಸಂಘಟಿತರಾಗಿ ಪ್ರಯತ್ನಿಸುತ್ತಿರುವ ಸಂಘಟನೆಗಳು, ರಾಷ್ಟ್ರ ಮಟ್ಟದಲ್ಲಿ ಸಂಘಟಿತರಾಗಿ ರೂಪಿಸಿಕೊಂಡಿರುವ ಸಂಘಟನೆ ಭಾರತ ನದಿಗಳ ಒಕ್ಕೂಟ. ಪಶ್ಚಿಮಘಟ್ಟ ಉಳಿಸಿ ಅಭಿಯಾನ ಕರ್ನಾಟಕದಲ್ಲಿ ಎಲ್ಲ ನದಿಗಳ ಮೂಲವಾದ ಪಶ್ಚಿಮಘಟ್ಟವನ್ನು ಉಳಿಸಿಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸುತ್ತಿರುವ ಒಕ್ಕೂಟ.

ಈ ಎರಡು ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ಕಾರ್ಯಾಗಾರವನ್ನು ದಿನಾಂಕ 2008 ಡಿಸೆಂಬರ್ 27 ಮತ್ತು /28 ರಂದು ಖಾನಾಪುರದ ಶಿವ ಶಕ್ತಿ ಭವನದಲ್ಲಿ ಶ್ರೀ ಅಮೃತ ಚಿರಂತಿ ಮಠ ರವರ ಸ್ಥಳೀಯ ಆತಿಥ್ಯದೊಂದಿಗೆ ನಡೆಸಲು ನಿರ್ದರಿಸಲಾಗಿದೆ. ಊಟ ಮತ್ತು ವಸತಿಗೆ ವ್ಯವಸ್ಥೆ ಮಾಡಲಾಗಿದೆ.

ಕಾರ್ಯಾಗಾರದಲ್ಲಿ:

1. ಭಾರತ ನದಿಗಳ ಒಕ್ಕೂಟದ ಪ್ರತಿನಿಧಿಗಳಿಂದ (ಇಂಡಿಯನ್ ರಿವರ್ ನೆಟ್ ವರ್ಕ್) ಒಕ್ಕೂಟದ ಕಾರ್ಯ ಚಟುವಟಿಕೆಗಳ ಕುರಿತು ತಿಳಿದುಕೊಳ್ಳುವುದು.
2. ಕರ್ನಾಟಕದ ವಿವಿದ ನದಿಕೊಳ್ಳಗಳಿಂದ ಆಗಮಿಸಿದ ಪ್ರತಿನಿದಿಗಳು ತಮ್ಮ ತಮ್ಮ ನದಿಕೊಳ್ಳಗಳ ಸ್ಥಿತಿ ಗತಿಯ ಕುರಿತು ವಿಚಾರಗಳನ್ನು ಹಂಚಿಕೊಳ್ಳುವುದು.
3. ಎಲ್ಲ ನದಿ ಕೊಳ್ಳಗಳಲ್ಲಿನ ಸಾಮಾನ್ಯ ಸಂಗತಿಗಳ ಕುರಿತು ರಾಜ್ಯ ಮಟ್ಟದಲ್ಲಿ ಸಂಗಟಿತರಾಗಿ ಕಾರ್ಯ ಯೋಜನೆಯನ್ನು ರೂಪಿಸುವುದು.
4. ರಾಷ್ಟ್ರ ಮಟ್ಟದಲ್ಲಿ ಭಾರತ ನದಿಗಳ ಒಕ್ಕೂಟದ ಜೊತೆ ಕಾರ್ಯಾಯೋಜನೆ ರೂಪಿಸುವುದು.
5. ಪಶ್ಚಿಮಘಟ್ಟ ಉಳಿಸಿ ಅಭಿಯಾನ ಅನುಸರಣಾ ಸಭೆ. ಬೆಂಗಳೂರಿನ ಕೊಡವ ಸಮಾಜ ಭವನದಲ್ಲಿ ತೆಗೆದುಕೊಂಡ ತೀರ್ಮಾನಗಳ ಕುರಿತು ಸಿಂಹಾವಲೋಕನ. ಮುಂದಿನ ಕಾರ್ಯಾಯೋಜನೆ.
6. ಪಶ್ಚಿಮಘಟ್ಟ ಉಳಿಸಿ ಅಭಿಯಾನ ಐದು ರಾಜ್ಯಗಳ ವಲಯ ಮಟ್ಟದ ಸಭೆ ಕುರಿತು ಚರ್ಚೆಗಳು.

ಕಾರ್ಯಾಗಾರದಲ್ಲಿ ಬಾಗವಹಿಸುವವರು ಮುಂಚಿತವಾಗಿ ಖಚಿತಪಡಿಸಿದಲ್ಲಿ ವ್ಯವಸ್ಥೆಗೆ ಅನುಕೂಲವಾಗುತ್ತದೆ. ದಯಮಾಡಿ ಈ ಕೆಳಗಿನ ದೂರವಾಣಿಗಳಿಗೆ ತಮ್ಮ ಬಾಗವಹಿಸುವಿಕೆ ಬಗ್ಗೆ ತಿಳಿಸಿ. ಶ್ರೀ. ಜನಾರ್ಧನ.ಜಿ.ಎಲ್.9480431983, ಶ್ರೀ. ಚಿರಂತಿ ಮಠ 9845735919, ಶ್ರೀ ಪಾಂಡುರಂಗ ಹೆಗ್ಡೆ 9448818099.

ವಿಶ್ವಾಸದೊಂದಿಗೆ

[signature]

ಜನಾರ್ಧನ .ಜಿ.ಎಲ್.

ಪಶ್ಚಿಮಘಟ್ಟ ಅಭಿಯಾನದ ಪರವಾಗಿ

ಸ್ಥಳ: ಖಾನಾಪುರ

ಬೆಳಗಾವಿ ಜಿಲ್ಲೆ

# ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
## ಕರ್ನಾಟಕ ರಾಜ್ಯ ಸಮೀತಿ
ಬಸವರಾಜ ನಿಲಯ ಚೌಕಿಮಠ ಶಿರಸಿ, (ಉತ್ತರ ಕನ್ನಡ)೫೮೧೪೦೧


## ಪತ್ರಿಕಾ ಪ್ರಕಟಣೆ

**ಪಶ್ಚಿಮ ಘಟ್ಟ ಕಾರ್ಯಪಡೆಗೆ – ಸ್ವಾಗತ.**

ರಾಜ್ಯ ಸರಕಾರವು ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ ಕಾರ್ಯಪಡೆಯನ್ನು ರಚಿಸಿ ಅದಕ್ಕೆ ಅಧ್ಯಕ್ಷರಾಗಿ ಶ್ರೀ ಅನಂತ ಹೆಗಡೆ, ಅಶೀಸರ ಅವರನ್ನು ನೇಮಿಸಿರುವದನ್ನು ನಾವು ಸ್ವಾಗತಿಸುತ್ತೇವೆ.

ಈ ಹಿಂದೆ ರಾಜ್ಯ ಮಟ್ಟದಲ್ಲಿ ಇಂತಹ ಕಾರ್ಯಪಡೆ ರಚನೆ ಮಾಡಬೇಕೆಂದು ಪಶ್ಚಿಮ ಘಟ್ಟ ಉಳಿಸಿ ಅಭಿಯಾನವು ರಾಜ್ಯ ಸರಕಾರವನ್ನು ಒತ್ತಾಯಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ನಮ್ಮ ಬೇಡಿಕೆಯನ್ನು ಶೀಘ್ರದಲ್ಲಿ ಈಡೇರಿಸಿರುವದಕ್ಕೆ ರಾಜ್ಯದ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು.

ಈ ಕಾರ್ಯಪಡೆಗೆ ಸಂವಿಧಾನಬದ್ಧವಾದ ಅಧಿಕಾರ ನೀಡಿ, ಅದರ ಮಾರ್ಗದರ್ಶನದಲ್ಲಿ ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರಕಾರಕ್ಕೆ ನಮ್ಮ ಆಗ್ರಹ.

ಕೇವಲ ಕಾರ್ಯಪಡೆಯನ್ನು ನೆಪಮಾತ್ರಕ್ಕೆ ರಚಿಸಿ ಈಗ ನಡೆದಿರುವ ಹಾಗೆ ಪಶ್ಚಿಮ ಘಟ್ಟದ ಹಸಿರಿನ ವಿನಾಶಕಾರಿ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವದಾದಲ್ಲಿ ಕಾರ್ಯಪಡೆ ರಚನೆಯ ಉದ್ದೇಶ ವ್ಯರ್ಥವಾದೀತು. ಆದುದರಿಂದ ಈ ಕಾರ್ಯಪಡೆಗೆ ಬಲ ಬರುವಂತಹ ಕ್ರಮವನ್ನು ಆದಷ್ಟು ಶೀಘ್ರದಲ್ಲಿ ಕೈಗೊಳ್ಳುವಂತೆ ನಾವು ಆಗ್ರಹಿಸುತ್ತೇವೆ.

ಪಾಂಡುರಂಗ ಹೆಗಡೆ
ರಾಜ್ಯ ಸಂಚಾಲಕರು
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

ದಿನಾಂಕ: 11.09.08
ಸ್ಥಳ : ಶಿರಸಿ

# ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

ಕರ್ನಾಟಕ ರಾಜ್ಯ ಸಮಿತಿ

ಪರಿಸರ ಸಂರಕ್ಷಣಾ ಕೇಂದ್ರ, ಚೌಕಿಮಠ, ಶಿರಸಿ, ಉತ್ತರ ಕನ್ನಡ,

ದೂರವಾಣಿ : 08384 225139 ಮೊ : 9448818099

---

## ಪಶ್ಚಿಮ ಘಟ್ಟಕ್ಕೆ ಬರಲಿರುವ ಆಪತ್ತುಗಳು

ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ ರಾಜ್ಯದ ವಿವಿಧ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ತಕ್ಷರು ಹಾಗು ಸಂಘಟನೆಗಳು ಮತ್ತು ವ್ಯಕ್ತಿಗಳು ಸೇರಿ ಪಶ್ಚಿಮ ಘಟ್ಟ ಉಳಿಸಿ ಅಭಿಯಾನದ ಅಂಗವಾಗಿ ದಿನಾಂಕ : 26.08.2008 ರಂದು ಬೆಂಗಳೂರಿನ ಕೊಡವ ಸಮಾಜದಲ್ಲಿ ಪಶ್ಚಿಮ ಘಟ್ಟಕ್ಕೆ ಬಂದಿರುವ ಆಪತ್ತುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ತೆಗೆದುಕೊಂಡು ಈ ಕೆಳಗಿನ ನಿರ್ಣಯಗಳು :

1) ಪಶ್ಚಿಮ ಘಟ್ಟದಲ್ಲಿನ ಸಮೃದ್ಧಿಯ ಬಯಲು ಸೀಮೆಯ ಸಂಪತ್ತು (The Health of the Hills, is the Wealth of the Plains) ಬೆಂಗಳೂರಿಗೆ ನೀರು ಬೇಕಾದಲ್ಲಿ ಕಾವೇರಿಯ ಮೂಲದಲ್ಲಿರುವ ಹಸಿರನ್ನು ರಕ್ಷಿಸುವುದು ಅನಿವಾರ್ಯವಾಗಿದೆ, ಕರ್ನಾಟಕದ ನೀರಿನ ಸುರಕ್ಷತೆ (Water Security) ಯನ್ನು ಸಾಧಿಸಲು ಪಶ್ಚಿಮ ಘಟ್ಟದಲ್ಲಿ ನಡೆಯಲಿರುವ ಎಲ್ಲಾ ವಿನಾಶಕಾರಿ ಯೋಜನೆಗಳನ್ನು ನಿಲ್ಲಿಸಬೇಕಾಗಿದೆ.

2) ಕರ್ನಾಟಕ ರಿನ್ಯುವೆಬಲ್ ಏನರ್ಜಿ ಡೆವಲಪ್‌ಮೆಂಟ್ ಏಜೆನ್ಸಿ ಲಿಮಿಟೆಡ್ (ಕ್ರೆಡೆಲ್) ಯ 73 ಕಿರು ಜಲ ವಿದ್ಯುತ್ ಯೋಜನೆಗಳನ್ನು ಪಶ್ಚಿಮ ಘಟ್ಟದ ಅರಣ್ಯವಿರುವ ಸೂಕ್ಷ್ಮ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಯೋಜನೆ ರೂಪಿಸಿದೆ. ಈ ಯೋಜನೆಗಳು ಅನುಷ್ಠಾನಗೊಂಡಲ್ಲಿ ಬೆಂಗಳೂರು ನಗರವೂ ಸೇರಿದಂತೆ ಬಯಲುಸೀಮೆಯ ಜನರ ನೀರಿನ ಮೂಲ ಆಸರೆಗೆ ಕಂಟಕಪ್ರಾಯವಾಗುವುದು. ಆದಕಾರಣ ಯಾವುದೇ ಜಲವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಬಾರದು. ಇದಲ್ಲದೆ ಉತ್ಪಾದಿಸಿದ ವಿದ್ಯುತ್ತನ್ನು ಗ್ರಿಡ್-ಗಳಿಗೆ ಸಾಗಿಸುವ ದಾರಿಗಾಗಿ ನೂರಾರು ಕಿ.ಮೀ ವರೆಗೆ ಸಮೃದ್ಧ ಮಳೆಕಾಡು ನಾಶವಾಗಲಿದೆ. ಅಲ್ಲದೆ ವನ್ಯಜೀವಿಗಳ ಚಲನವಲನಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ.

3) ಬ್ರಿಟೀಷರ ಆಳ್ವಿಕೆಯಲ್ಲಿ ಆಗುತ್ತಿದ್ದ ಖನಿಜ ಸಂಪತ್ತು ಲೂಟಿಯು ಈಗಲೂ ಮುಂದುವರಿದಿದೆ. ಇದರಿಂದ ಇಡಿ ರಾಜ್ಯದಲ್ಲಿಯ ಕುಡಿಯುವ ನೀರಿನ ಜೀವ ಸೆಲೆಯ ಮೇಲೆ ಪರಿಣಾಮ ಬೀರುವುದು.

4) ಪರಿಸರ ಸ್ನೇಹಿ ಪ್ರವಾಸ ತಾಣಗಳ ಹೆಸರಿನಲ್ಲಿ ನೂರಾರು ಏಕರೆ ಸಮೃದ್ಧ ಕಾಡುಗಳನ್ನು ನಾಶ ಮಾಡುತ್ತ ರೆಸಾರ್ಟ್ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿರುವುದು ಖೇದಕರ.

5) ಹೋಮ್ ಸ್ಟೇಗಳ ಹೆಸರಿನಲ್ಲಿ ಐಟಿ / ಬಿಟಿ ಕಂಪನಿಗಳು ಸ್ಟ್ರೇಸ ಬಸ್ಟರ್ಗಳಾಗಿ ~~ರೂಪದಲ್ಲಿ~~ ಉಪಯೇಗಿಸಲಾಗುತ್ತಿದೆ ಇವುಗಳಿಂದ ರೂಢಿಯಾಗಿ ಬಂದಿರುವ ಸ್ಥಳೀಯ ಸಾಂಸ್ಕೃತಿಕ, ಸಾಮಾಜಿಕವಾಗಿರುವ ಮೌಲ್ಯಗಳ ಮೇಲೆ ಗಂಭೀರ ಪರಿಣಾಮವಾಗಿದೆ. ಐಟಿ / ಬಿಟಿ ಕಂಪನಿಗಳು ಉದ್ಯೋಗಿಗಳ ಉತ್ಪಾದನಾ ಶಕ್ತಿಯನ್ನು ಹಿಗ್ಗಿಸಲು ಬೇರೆ ಕಂಪನಿಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಇಂತಹ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿವೆ.

6) ಪಶ್ಚಿಮ ಘಟ್ಟದ ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ಅರಣ್ಯ ನಾಶದ ಪರಿಣಾಮವಾಗಿ, ವನ್ಯಜೀವಿಗಳ ಹಾಗೂ ಮನಷ್ಯರುಗಳ ಮಧ್ಯೆ ಸಂಘರ್ಷ ಹೆಚ್ಚಳವಾಗಿದೆ. ಉದಾ: ಚಾಮರಾಜನಗರದಲ್ಲಿ ಕಳೆದ 3 ತಿಂಗಳ ಅವಧಿಯಲ್ಲಿ 1650 ಸಂಘರ್ಷ ನಡೆದಿರುವುದರ ಬಗ್ಗೆ ದಾಖಲೆ ಆಗಿದೆ. ಇದೇ ರೀತಿಯಾಗಿ ಅರಣ್ಯ ನಾಶವು ಮುಂದುವರಿದಲ್ಲಿ ಕಾಡು ಪ್ರಾಣಿಗಳು, ಬೆಂಗಳೂರಿಗೂ ಬರುವ ದಿನಗಳ ದೂರವಿಲ್ಲ.

ಕೊಟ್ಯಾಂತರ ವರ್ಷಗಳಿಂದ ವಿಕಾಸ ಹೊಂದುತ್ತಾ ಕೊಟ್ಯಾಂತರ ಜೀವ ಸಂಕುಲಗಳನ್ನು ರಕ್ಷಿಸುತ್ತಾ ಬಂದಿರುವ ಪಶ್ಚಿಮ ಘಟ್ಟವು ಇಂದು ಸೀಮಿತ ಅವಧಿಯಲ್ಲಿ ಸರ್ವನಾಶವಾಗುವ ದಿಸೆಯಲ್ಲಿದೆ.

ಪಶ್ಚಿಮ ಘಟ್ಟಗಳು ಪ್ರಸ್ತುತ ಪೀಳಿಗೆಗೆ ಸೀಮಿತವಾಗದೆ, ಇದನ್ನು ಮುಂದಿನ ಪೀಳಿಗೆಗಳಿಗಾಗಿ ಉಳಿಸುವುದು ಬೆಳೆಸುವುದು, ರಕ್ಷಿಸುವುದು, ನಮ್ಮೆಲ್ಲರ ಪ್ರಮುಖ ಜವಾಬ್ದಾರಿ ಆಗಿರುವುದರಿಂದ ಪಶ್ಚಿಮ ಘಟ್ಟ ಹಾಗೂ ಬಯಲುಸೀಮೆಯ ಜನರಲ್ಲಿ ಇದರ ರಕ್ಷಣೆಯ ಮಹತ್ವದ ಅರಿವು ಮೂಡಿಸುವುದು ಪಶ್ಚಿಮ ಘಟ್ಟ ಅಭಿಯಾನದ ಮೂಲ ಧ್ಯೇಯವಾಗಿದೆ.

ಸಂಚಾಲಕ ಸಮಿತಿ

| | | | |
|---|---|---|---|
| (ಪಾಂಡುರಂಗಹೆಗಡೆ) | (ಜನಾರ್ಧನ್ ಜಿ.ಎಲ್) | (ರವಿಚಂಗಪ್ಪ) | (ಮಂಜುನಾಥ) |
| ರಾಜ್ಯ ಸಂಚಾಲಕರು | ಪರಿಸರ ಅಧ್ಯಯನ | ಕಾವೇರಿ ಸೇನೆ, | ವೈಡರ್‌ನೆಸ್ ಕ್ಲಬ್ |
| ಪಶ್ಚಿಮ ಘಟ್ಟ ಅಭಿಯಾನ | ಕೇಂದ್ರ, ಶಿವಮೊಗ್ಗ | ಕೊಡಗು | |

ದಿನಾಂಕ : 28.08.2008

ಸ್ಥಳ : ಬೆಂಗಳೂರು.

**ಪಶ್ಚಿಮ ಘಟ್ಟ ಉಳಿಸಿ ಅಭಿಯಾನ**
**ಕರ್ನಾಟಕ ರಾಜ್ಯ ಸಮಿತಿ**
ಬಸವರಾಜ ನಿಲಯ ಚೌಕಿಮಠ ಶಿರಸಿ, (ಉತ್ತರ ಕನ್ನಡ)೫೮೧೪೦೧
**Ph : 08384 225139M: 9448818099**

---

ಗೆ

## ಪಶ್ಚಿಮ ಘಟ್ಟ ಉಳಿಸಿ ಕಾರ್ಯಾಗಾರದ ಮುಂದುವರೆದ ಸಭೆ

ನಾವು ಕೆಮ್ಮಣ್ಣಗುಂಡಿಯಲ್ಲಿ ಮೇ, 2008 ರ ಕೊನೆಯಲ್ಲಿ ಸೇರಿ ಪಶ್ಚಿಮ ಘಟ್ಟದ ಉಳಿವಿಗಾಗಿ ವಿವರವಾಗಿ ಚರ್ಚಿಸಿ 'ಕೆಮ್ಮಣ್ಣಗುಂಡಿ ಘೋಷಣಾ' ಪತ್ರವನ್ನು ಜಾರಿಗೊಳಿಸಿದ್ದೆವು. ಇದರಿಂದ ಸರಕಾರದ ಮೇಲೆ ಒತ್ತಡ ತರಲು ಸಹಾಯಕವಾಗಿದೆ.

ನಮ್ಮ ಘೋಷಣೆಯಲ್ಲಿ ಗಣಿಗಾರಿಕೆಯನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ ಬೇಡಿಕೆಯನ್ನು ಇಡಲಾಗಿತ್ತು. ಈ ಕುರಿತು ರಾಜ್ಯ ಸರಕಾರ ತನ್ನ ನೀತಿಯಲ್ಲಿ ಪರಿವರ್ತನೆ ಮಾಡಲು ಯೋಚಿಸುತ್ತಿರುವದು ಆಶಾದಾಯಕ ಅಂಶವಾಗಿದೆ.

ಕಳೆದ ಎರಡು ತಿಂಗಳಲ್ಲಿ ಹಲವಾರು ಘಟನೆಗಳು ಜರುಗಿದ್ದು ಪಶ್ಚಿಮ ಘಟ್ಟದ ಭವಿಷ್ಯವನ್ನು ನಿರ್ಧರಿಸುವ ಯೋಜನೆಗಳನ್ನು ಸರಕಾರ ಕೈಗೆತ್ತಿಕೊಳ್ಳುವ ಲಕ್ಷಣ ಕಂಡು ಬರುತ್ತಿದೆ. ಅವುಗಳಲ್ಲಿ ಈ ಕೆಳಗಿನ ಯೋಜನೆಗಳ ಬಗ್ಗೆ ನಾವು ಚರ್ಚಿಸಿ ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಾಗಿದೆ.

- ಗುಂಡ್ಯ ಜಲವಿದ್ಯುತ್ ಯೋಜನೆ
- ತದಡಿ ಉಷ್ಣ ವಿದ್ಯುತ್ ಸ್ಥಾವರ
- ಕಿರು ಜಲವಿದ್ಯುತ್ ಯೋಜನೆಗಳಿಂದ ಆಗಲಿರುವ ಅಪಾಯಗಳು
- ಗಣಿಗಾರಿಕೆ
- ಜಪಾನ ನೆರವಿನ ಅರಣ್ಯೀಕರಣ ಯೋಜನೆ
- ಚಾಮಲಾಪುರ ಉಷ್ಣ ಸ್ಥಾವರ
- ನಿರಂತರವಾಗಿ ಮುಂದುವರಿದಿರುವ ಅರಣ್ಯಲೂಟಿ/ನಾಶ

ಈ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲು ನಾವು ಬೆಂಗಳೂರಿನಲ್ಲಿ ಸೇರುವ ಸದವಕಾಶವನ್ನು ಕೊಡಗಿನ ಗೆಳೆಯರು ಕೊಟ್ಟಿದ್ದಾರೆ ವಿವರ ಹೀಗಿದೆ.

**ಪಶ್ಚಿಮ ಘಟ್ಟ ಉಳಿಸಿ -- Follow up meeting**

**ವಿಷಯ: ಪಶ್ಚಿಮ ಘಟ್ಟಕ್ಕೆ ಬರಲಿರುವ ಅಪಾಯಕಾರಿ ಯೋಜನೆಗಳು, ಇವುಗಳನ್ನು ಹೇಗೆ ಎದುರಿಸುವದು?**

**ಸ್ಥಳ : ಕೊಡವ ಸಮಾಜ, No: 7, 1st Main Road ವಸಂತ ನಗರ, ಬೆಂಗಳೂರು.**

**(Mount - Carmel College Playground) ಎದುರಿಗೆ Ph : 22260188**

**ದಿನಾಂಕ: 26 ಅಗಸ್ಟ 2008**

**ಸಮಯ: ಮುಂಜಾನೆ 10 ರಿಂದ ಸಾಯಂಕಾಲ 6 ಗಂಟೆ.**

ಕೇವಲ ಒಂದು ದಿನದ ಸಭೆ ಇಟ್ಟುಕೊಂಡಿರುವದರಿಂದ ವಸತಿಯ ವ್ಯವಸ್ಥೆ ಮಾಡಿರುವದಿಲ್ಲ. ಆದರೆ ದೂರದ ಊರಿನಿಂದ ಬಂದವರ ಅನುಕೂಲಕ್ಕಾಗಿ ಕೊಡವ ಸಮಾಜದಲ್ಲಿ ಎರಡು ರೂಮನ್ನು ಕಾದಿರಿಸಲಾಗಿದೆ. ಪ್ರಯಾಣ ವೆಚ್ಚ ತಾವೇ ಹಾಕಿಕೊಂಡರೆ ಅನುಕೂಲ. ಅನಿವಾರ್ಯವಾದಲ್ಲಿ ಪ್ರಯಾಣ ವೆಚ್ಚದ ವ್ಯವಸ್ಥೆ ಮಾಡಲಾಗುವುದು. ಕೊಡವ ಸಾಮಾಜದವರು ಸ್ಥಳ ಹಾಗೂ ಊಟ/ತಿಂಡಿಯ ವ್ಯವಸ್ಥೆಯನ್ನು ಮಾಡಿರುತ್ತಾರೆ.

**ದಯವಿಟ್ಟು ಬನ್ನಿ.**

ಸಂಪರ್ಕಿಸಿ : ಪಾಂಡುರಂಗ ಹೆಗಡೆ (9448818099)
ಜನಾರ್ಧನ್ (09480431983)

**ಪಾಂಡುರಂಗ ಹೆಗಡೆ**
ಸಂಚಾಲಕರು,
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
ಕರ್ನಾಟಕ ರಾಜ್ಯ ಸಮಿತಿ

ದಿನಾಂಕ : 16-8-2008

# ಪಶ್ಚಿಮ ಘಟ್ಟ ಉಳಿಸಿ

## ಕಾರ್ಯಾಗಾರ

ದಿ. 27, 28, 29 ಮೇ, 2008

| ಸಂಖ್ಯೆ | ಹೆಸರು/ವಿಳಾಸ | ಫೋ.ನಂ. | ಸಹಿ |
|---|---|---|---|
| | | | |
| | | | |
| | | | |
| | | | |
| | | | |

P.T.O

# ಪಶ್ಚಿಮ ಘಟ್ಟ ಉಳಿಸಿ ಕಾರ್ಯಾಗಾರ

## ಮೌಲ್ಯಮಾಪನ

ಈ ಕಾರ್ಯಾಗಾರದಲ್ಲಿ ತಾವು ಸಕ್ರಿಯವಾಗಿ ಭಾಗವಹಿಸಿ, ತಮ್ಮ ಅಮೂಲ್ಯ ಸಲಹೆ/ಸೂಚನೆಗಳನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ಈ ಕಾರ್ಯಾಗಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ದಯವಿಟ್ಟು ತಿಳಿಸಿ. ಪ್ರತಿಯೊಂದು ವಿಷಯದ ಮುಂದೆ (✓) ಗುರುತನ್ನು ಮಾಡಬೇಕಾಗಿ ವಿನಂತಿ.

| | ವಿಷಯ | ಉತ್ತಮ | ಸಾಧಾರಣ | ಚೆನ್ನಾಗಿಲ್ಲ |
|---|---|---|---|---|
| 1. | ಪ್ರಸ್ತಾವನೆ/ವಿಷಯ ಮಂಡನೆ | | | |
| 2. | ಅನುಭವ ಹಂಚಿಕೆ | | | |
| 3. | ಪಶ್ಚಿಮ ಘಟ್ಟದ ಸಮಸ್ಯೆಗಳು | | | |
| 4. | ಗುಂಪು ಚರ್ಚೆ | | | |
| 5. | ಕಾರ್ಯ ಯೋಜನೆ | | | |
| 6. | ಉಳಿಯುವ ವ್ಯವಸ್ಥೆ | | | |
| 7. | ಊಟ, ತಿಂಡಿ ವ್ಯವಸ್ಥೆ | | | |
| 8. | ವಾಹನದ ವ್ಯವಸ್ಥೆ | | | |

ಈ ಕಾರ್ಯಾಗಾರಕ್ಕೆ ಬರುವ ಮುಂಚೆ ತಾವು ಊಹಿಸಿದಂತೆ ವಿಷಯಗಳ ಚರ್ಚೆ ನಡೆದು ಪಶ್ಚಿಮ ಘಟ್ಟದಲ್ಲಿನ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚಿಂತನ, ಮನನ ನಡೆಯಿತೆ? ಪ್ರತಿ ವರ್ಷ ನಾವು ಈ ಕಾರ್ಯಾಗಾರವನ್ನು ಮಾಡಿ ಪಶ್ಚಿಮ ಘಟ್ಟದ ಸ್ಥಿತಿಗತಿಯ ಬಗ್ಗೆ ಸಂಘಟಿತರಾಗಿ ಚಿಂತಿಸೋಣವೆ?

ನಿಮ್ಮ ಅನಿಸಿಕೆ ತಿಳಿಸಿ.

ಹೆಸರು (ಐಚ್ಛಿಕ)

## Travelling Expenses

ಪಶ್ಚಿಮ ಘಟ್ಟ ಉಳಿಸಿ ಕಾರ್ಯಾಗಾರ

ದಿನಾಂಕ : 28/29 May, 2008, ಕೆಮ್ಮಣ್ಣುಗುಂಡಿ

ಹೆಸರು :

ವಿಳಾಸ :

| ಪ್ರಯಾಣದ ವಿವರ | | | | |
|---|---|---|---|---|
| ದಿನಾಂಕ | ಎಲ್ಲಿಂದ | ಎಲ್ಲಿಗೆ | ಕಿ.ಮಿ. | ಮೊತ್ತ |
| | | | | |
| | | | | |
| | | | | |
| | | | | |
| | | | | |
| | | | ಅಂತು | |

ರೂ. ------------------------------------------------------------

------------------------------------------------------------

ಪ್ರಯಾಣದ ಖರ್ಚು ಮಾಡಿರುತ್ತೇನೆ. ಈ ಹಣ ನನಗೆ ತಲುಪಿದೆ.

ದಿನಾಂಕ : ಸಹಿ

ವಿ.ಸೂ : ದಯವಿಟ್ಟು ನೀವು ಪ್ರಯಾಣ ಮಾಡಿದ ಬಸ್, ರೈಲು ಟಿಕೆಟನ್ನು ಲಗತ್ತಿಸಿ.

(ಮ.ತಿ.ನೋ.)

ಪ್ರಯಾಣದ ಭತ್ಯೆ ಕುರಿತಾಗಿಸಲಹೆ/ಸೂಚನೆ

- ನಾವು ನಿಮ್ಮ ಬಸ್ ಪ್ರಯಾಣದ ಖರ್ಚನ್ನು ಭರಿಸುತ್ತೇವೆ. ದಯಮಾಡಿ ಬಸ್/ರೈಲು ಟಿಕೆಟನ್ನು ಲಗತ್ತಿಸಿ.
- ಒಂದೇ ಸಂಸ್ಥೆಯಿಂದ ಎರಡು ಜನರು ಬಂದಿದ್ದಲ್ಲಿ ಒಂದೇ ಫಾರಂ ತುಂಬಬೇಕಾಗಿ ವಿನಂತಿ
- ಆಟೋ ಖರ್ಚು ಮತ್ತು, ಊಟ/ ತಿಂಡಿಯ ಖರ್ಚನ್ನು ದಯವಿಟ್ಟು ಇದರಲ್ಲಿ ಸೇರಿಸ ಬೇಡಿ.
- ಕೆಮ್ಮಣ್ಣಗುಂಡಿಯಲ್ಲಿ ವಸತಿ/ ಊಟ/ ತಿಂಡಿಯ ಖರ್ಚನ್ನು ನಾವೇ ಭರಿಸುತ್ತೆವೆ.
- ರೈಲಿನಲ್ಲಿ ಪ್ರಯಾಣ ಮಾಡಿದಲ್ಲಿ ನಾವು ಸ್ಲೀಪರ್ ಕ್ಲಾಸನ ವೆಚ್ಚವನ್ನು ಮಾತ್ರ ಕೊಡಲು ಸಾಧ್ಯ.
- ಎನಾದರೂ ಸಮಸ್ಯೆಗಳಿದಲ್ಲಿ ಸಂಘಟಕರನ್ನು ಸಂಪರ್ಕಿಸಿ.

# ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

## ಕರ್ನಾಟಕ ರಾಜ್ಯ ಸಮಿತಿ, ಶಿರಸಿ

## ಪತ್ರಿಕಾ ಪ್ರಕಟಣೆಗಾಗಿ

### ಕೆಮ್ಮಣ್ಣು ಗುಂಡಿ (ಪಶ್ಚಿಮ ಘಟ್ಟ ಉಳಿಸಿ) ಘೋಷಣೆ

ಕಳೆದ ಇಪ್ಪತ್ತು ವರ್ಷಗಳಿಂದ ನಿರಂತರ ಅಧ್ಯಯನದ ಮೂಲಕ ಪಶ್ಚಿಮ ಘಟ್ಟದ ಉಳಿವಿಗಾಗಿ ಸಂಘಟನಾತ್ಮಕವಾಗಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಯುತ್ತಿದೆ. ಪ್ರಮುಖವಾಗಿ ಶರಾವತಿ, ಕಾಳಿ, ಕಾವೇರಿ ನದಿ ಕೊಳ್ಳಗಳ ಅಧ್ಯಯನ ನಡೆಸಿದಾಗ ಪಶ್ಚಿಮ ಘಟ್ಟದ ಅವನತಿಯ ಅರಿವಾಯಿತು. ಈ ಸಂಬಂಧ ಪಶ್ಚಿಮ ಘಟ್ಟ ಉಳಿಸಲು ರಾಜ್ಯದ ಎಲ್ಲಾ ಜಿಲ್ಲಾ ಪರಿಸರಾಸಕ್ತ ಸಂಘಟನೆಗಳು, ವಿಚಾರವಂತರು, ಪರಿಸರ ತಜ್ಞರೊಳಗೊಂಡು ಕೆಮ್ಮಣ್ಣು ಗುಂಡಿಯಲ್ಲಿ ಎರಡು ದಿನದ ಕಾರ್ಯಾಗಾರ ನಡೆಯಿಸಲಾಯಿತು. ಕಾರ್ಯಾಗಾರದಲ್ಲಿ ಪಶ್ಚಿಮ ಘಟ್ಟದ ಉಳಿವಿಗಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಂಡಲ್ಲಿ ಜೀವ ವೈವಿಧ್ಯ ಸಂರಕ್ಷಣೆ ಸಾಧ್ಯ ಎಂಬ ಅಭಿಪ್ರಾಯಕ್ಕೆ ಬರಲಾಯಿತು.

೧. ಪಶ್ಚಿಮ ಘಟ್ಟದಲ್ಲಿ ಅಳಿದುಳಿದಿರುವ ನೈಸರ್ಗಿಕ ಅರಣ್ಯ ಅತ್ಯಲ್ಪ, ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ನೈಸರ್ಗಿಕ ಅರಣ್ಯದ ಪುನರಸೃಷ್ಟಿ ಅಸಾಧ್ಯ. ಈ ಕಾರಣಕ್ಕಾಗಿ ಯಾವುದೇ ನೈಸರ್ಗಿಕ ಅರಣ್ಯದ ವಿನಾಶಕಾರಿ ಯೋಜನೆಗಳನ್ನು / ಚಟುವಟಿಕೆಗಳನ್ನು ಅನುಷ್ಠಾನ ಮಾಡಲೇ ಬಾರದು.

೨. ಅರಣ್ಯೀಕರಣ ಯೋಜನೆಯಡಿಯಲ್ಲಿ ಸ್ಥಳೀಯರ ಸಹಭಾಗಿತ್ವದಲ್ಲಿ ಸ್ಥಾನಿಕ ( ಸ್ಥಳೀಯ ) ವೈವಿಧ್ಯಮಯ ಸಸ್ಯಗಳನ್ನು ಬೆಳೆಸಬೇಕು.

೩. ಗಣಿ ಉದ್ಯಮವನ್ನು ರಾಷ್ಟ್ರೀಕರಣಗೊಳಿಸಬೇಕು.

೪. ಖಾಸಗಿ ಮತ್ತು ರೆವಿನ್ಯು ಭೂಮಿಯಲ್ಲಿನ ನೈಸರ್ಗಿಕ ಸಂಪತ್ತುಗಳಾದ ಮಣ್ಣು, ನೀರು, ಮರಳು ಯಾವುದೇ ಕಾರಣಕ್ಕೂ ಮಾರಾಟಕ್ಕೆ ಅನುಮತಿ ನೀಡಬಾರದು.

೫. ಅರಣ್ಯದ ಉಳಿವಿಗಾಗಿ ಅರಣ್ಯದ ಮೇಲೆ ಒತ್ತಡ ಕಡಿಮೆ ಮಾಡಲು ಪರ್ಯಾಯ ಶಕ್ತಿ ಸಂಪನ್ಮೂಲಗಳಾದ ಉರುವಲು ಇಂಧನಗಳಾದ ಗೋಬರ್ ಗ್ಯಾಸ, ಸೌರ ಶಕ್ತಿ, ಪವನ ಶಕ್ತಿಗಳನ್ನು ಸರ್ಕಾರದಿಂದ ಉಚಿತವಾಗಿ ನೀಡಬೇಕು.

೬. ರಾಜ್ಯದ ನದಿಗಳ ಉಳಿವಿಗಾಗಿ ಪಶ್ಚಿಮ ಘಟ್ಟದ ಉಳಿವು ಅನಿವಾರ್ಯವಾಗಿದೆ ಮತ್ತು ಅಂತರ್ಜಲ ವೃದ್ಧಿಗಾಗಿ ಕೆರೆ ಕಟ್ಟೆ, ಹಳ್ಳ ಕೊಳ್ಳಗಳ, ನದಿಗಳ ಸಂರಕ್ಷಣೆ ಬಹಳ ತುರ್ತಾಗಿ ಆಗಬೇಕಾಗಿದೆ.

೭. ರಾಜ್ಯದ ಎಲ್ಲಾ ಶಾಲಾ- ಕಾಲೇಜುಗಳ ವಿದ್ಯಾಭ್ಯಾಸದಲ್ಲಿ ಪಶ್ಚಿಮ ಘಟ್ಟದ ಮಹತ್ವ ಬಿಂಬಿಸುವ ಪಠ್ಯವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.

೮. ಗ್ರಾಮ ಪಂಚಾಯಿತಿ ಮತ್ತು ವಾರ್ಡ ಹಂತದಲ್ಲಿ ಪರಿಸರ ಜಾಗೃತಿ ಸಮಿತಿಗಳನ್ನು ರಚಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಮಿತಿಯನ್ನು ಅನುಷ್ಠಾನಗೊಳಿಸಬೇಕು.

ಈ ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರ ನೆರವೇರಿಸಲೇಬೇಕು ಇಲ್ಲವಾದಲ್ಲಿ ಪಶ್ಚಿಮ ಘಟ್ಟ ಉಳಿವು ಅಸಾಧ್ಯ.

ಈ ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರ ಕೂಡಲೇ ಅನುಷ್ಠಾನಗೊಳಿಸಬೇಕು.

ಈ ಕುರಿತು ಕರ್ನಾಟಕ ರಾಜ್ಯ ಸರ್ಕಾರ ಶೀಘ್ರವಾಗಿ ಕೂಡಲೇ ಸೂಕ್ತ ಕ್ರಮಕೈಗೊಳ್ಳುವುದಾಗಿ ನಂಬಿರುವ,

**ಪಾಂಡುರಂಗ ಹೆಗಡೆ**
ಸಂಚಾಲಕರು
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
ಕರ್ನಾಟಕ ರಾಜ್ಯ ಸಮಿತಿ
ಸಂಪರ್ಕ ವಿಳಾಸ:
ಪರಿಸರ ಸಂರಕ್ಷಣಾ ಕೇಂದ್ರ,
ಚೌಕಿಮಠ, ಶಿರಸಿ, ಉತ್ತರ ಕನ್ನಡ.
ದೂರವಾಣಿ : ೦೮೩೮೪ ೨೨೫೧೯೬
Mob 9448818099

**ಜನಾರ್ಧನ್ .ಜಿ.ಎಲ್.**
ಜಿಲ್ಲಾ ಸಂಚಾಲಕರು
ಪಶ್ಚಿಮ ಘಟ್ಟ ಉಳಿಸಿ ಅಭಿಯಾನ
ಶಿವಮೊಗ್ಗ ಜಿಲ್ಲಾ ಸಮಿತಿ
ಸಂಪರ್ಕ ವಿಳಾಸ :
ಪರಿಸರ ಅಧ್ಯಯನ ಕೇಂದ್ರ,
ಅಣ್ಣಪ್ಪ ಗಾರ್ಡನ್, ಸಂತೇಕಡೂರು.
ಶಿವಮೊಗ್ಗ ತಾ/ಜಿ.
ದೂರವಾಣಿ : ೦೮೧೮೨ ೨೪೦೬೮೮

ಮಾನ್ಯರೇ,

ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಸಂಘಟನೆಗಳು, ವ್ಯಕ್ತಿಗಳು, ಪರಿಸರ ಕಾರ್ಯಕರ್ತರು, ಸೇರಿ 'ಪಶ್ಚಿಮ ಘಟ್ಟ ಜ್ಯೋತಿ' ಅಭಿಯಾನ ವನ್ನು ಪ್ರಾರಂಭಿಸಿದ್ದೇವೆ.

~~ಈ ಅಭಿಯಾನದ ಅಂಗವಾಗಿ~~
~~ಪ್ರ[illegible] [illegible]~~

ದಿನಾಂಕ: 26/08/08 ರಂದು ರಾಜ್ಯದ ವಿವಿಧ ಪ್ರದೇಶಗಳಿಂದ ಬಂದ ಕಾರ್ಯಕರ್ತರು ಈ ಪಶ್ಚಿಮ ಘಟ್ಟಕ್ಕೆ ಎದುರಾಗಿರುವ ~~[illegible]~~ ಆಪತ್ತುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸ~~[illegible]~~ಲಾಯಿತು.

ಈ ಕುರಿತು ಅಭಿಯಾನದ ಅಭಿಪ್ರಾಯವನ್ನು ಹಂಚಿಕೊಳ್ಳಲು ದಿ: 27/08/08 ರಂದು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯನ್ನು ಇಟ್ಟುಕೊಳ್ಳಲಾಗಿದೆ.

ದಿನಾಂಕ : 27/08/08
ಸಮಯ : ಬೆಳಿಗ್ಗೆ 10:30
ಸ್ಥಳ : ಪ್ರೆಸ್ ಕ್ಲಬ್, ಬೆಂಗಳೂರು.

ದಯವಿಟ್ಟು ಈ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಬೇಕಾಗಿ ಕೋರುತ್ತೇವೆ.

ಪಾಂಡುರಂಗ ಹೆಗಡೆ
ಸಂಚಾಲಕರು,
ಪಶ್ಚಿಮ ಘಟ್ಟ ಜ್ಯೋತಿ ಅಭಿಯಾನ,
ಕರ್ನಾಟಕ.

ದಿನಾಂಕ: 26/08/08
ಸ್ಥಳ: ಕಬ್ಬನ ಪಾರ್ಕ,
ಬೆಂಗಳೂರು.

-------------------------------------------

-------------------------------------------

------------------------------- **ಇವರಿಗೆ,**

ವಿಷಯ : ಪಶ್ಚಿಮ ಘಟ್ಟದ ಜೀವ ವೈವಿಧ್ಯತೆಹಾಗೂ ನದಿ ತಿರುವು ಯೋಜನೆ ಕುರಿತು

ಮಾನ್ಯರೇ,

ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಅಂತರಾಷ್ಟ್ರೀಯ ಕಾನೂನು ವಿಭಾಗದಲ್ಲಿ ಉನ್ನತ ಹುದ್ದೆಯಲ್ಲಿರುವ ಡಾ.ವೆಂಕಟಾಚಲ ಹೆಗಡೆ ಅವರೊಂದಿಗೆ ಸಂವಾದ ಏರ್ಪಡಿಲಾಗಿದೆ.
ವೆಂಕಟಾಚಲ ಹೆಗಡೆ ಶಿರಸಿ ಸಮೀಪದ ಹುಳಗೋಳದವರಾಗಿದ್ದು, ಜಾಗತಿಕ ಮಟ್ಟದಲ್ಲಿ ಅಧ್ಯಯನ ಮಾಡಿ, ವಿಶ್ವ ವ್ಯಾಪಾರ ಸಂಸ್ಥೆಯಿಂದ ಕೃಷಿಯ ಮೇಲಾಗುವ ಪರಿಣಾಮಗಳು. ಈ ಕುರಿತು ಭಾರತ ಸರಕಾರವನ್ನು ಹಲವಾರು ವರ್ಷಗಳ ಕಾಲ ಡಾ. ವೆಂಕಟಾಚಲ ಹೆಗಡೆ ಪ್ರತಿನಿಧಿಸಿರುತ್ತಾರೆ.

- ಅಂತರಾಷ್ಟ್ರೀಯ ಮಟ್ಟದಲ್ಲಿ ನದಿ ನೀರಿನ ಹಂಚಿಕೆ ಕುರಿತು ಅಧ್ಯಯನ, ನದಿ ಜೋಡಣೆ ಬಗ್ಗೆ ಅವರ ನಿಲುವು, ಪಶ್ಚಿಮ ಘಟ್ಟದಲ್ಲಿನ ನದಿ ತಿರುವು ಯೋಜನೆಗಳ ಪರಿಣಾಮದ ಕುರಿತು.
- ಪಶ್ಚಿಮ ಘಟ್ಟದಲ್ಲಿರುವ ಅಪಾರವಾದ ಜೀವ ವಿವಿಧತೆಯನ್ನು ಹೇಗೆ ಸಂರಕ್ಷಿಸಲು ಸಾಧ್ಯದ ಕುರಿತು

ದಯವಿಟ್ಟು ಈ ಸಂವಾದ ಕಾರ್ಯಕ್ರಮಕ್ಕೆ ಬನ್ನಿ.

**ದಿನಾಂಕ : 21/6/2008, ಶನಿವಾರ**

**ಸಮಯ : ಸಂಜೆ 3.30 ಗಂಟೆಗೆ**

**ಸ್ಥಳ : ಪಂಚವಟಿ ಹೊಟೆಲ್ (ಚಿನ್ಮಯ ಸಭಾಂಗಣ)**

ತಮ್ಮನ್ನು ಆಹ್ವಾನಿಸುವ,

**ಪಾಂಡುರಂಗ ಹೆಗಡೆ**
**ಪ್ರಕೃತಿ, ಶಿರಸಿ**

# ಪಶ್ಚಿಮ ಘಟ್ಟ ಉಳಿಸಿ

ಕರ್ನಾಟಕದ ಪಶ್ಚಿಮ ಘಟ್ಟದ ಭಾಗದ ಜಿಲ್ಲೆಗಳ ಪರಿಸರಾಸಕ್ತರ ಎರಡು ದಿನಗಳ ಸಮಾವೇಶ ಚಿಕ್ಕಮಗಳೂರು ಜಿಲ್ಲೆ ಕೆಮ್ಮಣ್ಣುಗುಂಡಿಯ ಬೆಟ್ಟದಲ್ಲಿನ ಮರಗಳ ನೆರಳಿನಲ್ಲಿ ನಡೆಯಿತು. ಸಮಾವೇಶದ ಮೊದಲನೆ ದಿನದ ಆಧಿವೇಶನ ದಿನಾಂಕ 28/5/08 ರಂದು ಬೆಳ್ಳಿಗ್ಗೆ 11–00 ಗಂಟೆಗೆ ಆರಂಭವಾಯಿತು.

ಅಧಿವೇಶನವನ್ನು ಶ್ರೀಯುತ ಪಾಂಡುರಂಗ ಹೆಗಡೆ, ಶಿರಸಿ,ಇವರು ಆಧಿವೇಶನದ ಕುರಿತು ಪ್ರಸ್ತಾವನೆಯನ್ನು ಮಂಡಿಸಿ ಎಲ್ಲರನ್ನೂ ಸ್ವಾಗತಿಸಿದರು.

ಪಾಂಡುರಂಗ ಹೆಗಡೆಯವರು ಪಶ್ಚಿಮ ಘಟ್ಟ ಉಳಿಸಿ ಅಭಿಯಾನ 20 ವರ್ಷಗಳ ಹಿಂದೆ ಕನ್ಯಾಕುಮಾರಿಯಿಂದ ಒಂದು ತಂಡ ಪಾದಯಾತ್ರೆಯ ಮೂಲಕ ಗೋವಾವನ್ನು ಮತ್ತೊಂದು ತಂಡ ಗುಜರಾತನಿಂದ ಗೋವಾವನ್ನು ತಲುಪಿ ಅಲ್ಲಿ ಪಶ್ಚಿಮ ಘಟ್ಟದ ಅಳಿವು ಉಳಿವಿನ ಕುರಿತು ಅಧ್ಯಯನದ ವಿಚಾರಗಳನ್ನು ಚರ್ಚೆ. ಅಂತಿಮವಾಗಿ ಸರ್ಕಾರ ಹಾಗೂ ಜನತೆಗೆ ಪಶ್ಚಿಮ ಘಟ್ಟದ ಪರಿಸ್ಥಿತಿಯ ಕುರಿತು ಒಂದು ವರದಿಯನ್ನು ಕೊಟ್ಟಿತ್ತು. ಅಲ್ಲದೆ ಪಶ್ಚಿಮ ಘಟ್ಟ ಮತ್ತು ಬ್ರೆಜಿಲ್‌ನ ಅಮೆಜಾನ ಕಾಡು ಪೃಥ್ವಿಯ ಎರಡು ಪುಪ್ಪುಸಗಳಿದ್ದಂತೆ ಅವುಗಳನ್ನು ರಕ್ಷಣೆ ಮಾಡುವುದು ನಮ್ಮ ಹೊಣೆ ಎಂದು ತಿಳಿಸಿತ್ತು. ಇಂದಿಗೆ 20 ವರ್ಷಗಳು ಸಂದಿವೆ. ಪಶ್ಚಿಮ ಘಟ್ಟಗಳ ಮೇಲೆ ನಡೆಯುತ್ತಿರುವ ಆವ್ಯಾಹತ ದಾಳಿ ಕಡಿಮೆಯಾಗಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಹಲವಾರು ಯೋಜನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲಿವೆ. ಇಂತಹ ಸಂದರ್ಭದಲ್ಲಿ 20 ವರ್ಷಗಳ ಹಿಂದೆ ಅಧ್ಯಯನದಲ್ಲಿ ಭಾಗವಹಿಸಿದ್ದ ಬಹಳ ಮುಖ್ಯ ವ್ಯಕ್ತಿಗಳು ಇಂದು ದೊಡ್ಡ ಚಳುವಳಿಗಳು ಮತ್ತು ಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದಾರೆ.

ಈ ಎಲ್ಲಾ ಅಂಶಗಳನ್ನು ಮನಗಂಡು ಮತ್ತೊಮ್ಮೆ ಸಮಾನ ಮನಸ್ಕರೆಲ್ಲರೂ ಒಂದೆಡೆ ಕುಳಿತು ಪರಿಸ್ಥಿತಿಯ ಅವಲೋಕನ ಮಾಡಿ ಮುಂದಿನ ಹೆಜ್ಜೆಗಳನ್ನು ಇಡುವ ಎಂಬ ಉದ್ದೇಶದೊಂದಿಗೆ ಎಲ್ಲರನ್ನೂ ಆಹ್ವಾನಿಸಿದ್ದೇವೆ ಎಂದು ತಿಳಿಸಿದರು.

**ಅಧಿವೇಶನ ಎರಡು:**

ಶ್ರೀ ಪಾಂಡುರಂಗ ಹೆಗಡೆಯವರ ಪ್ರಸ್ತಾವನೆಯ ನಂತರ ಭಾಗವಹಿಸಿದ್ದ ಎಲ್ಲ ಪರಿಸರಾಸಕ್ತರು ತಮ್ಮ ತಮ್ಮ ಪರಿಚಯ ಮಾಡಿಕೊಂಡರು.

ಪರಿಚಯವಾದ ನಂತರ ಎರಡು ದಿನಗಳನ್ನು ಹೇಗೆ ಬಳಸಿಕೊಂಡು ಎಲ್ಲ ವಿಚಾರಗಳನ್ನು ಹಂಚಿಕೊಳ್ಳಬೇಕು ಎಂಬ ಬಗ್ಗೆ ಚರ್ಚಿಸಿದರು. ಮೊದಲಿಗೆ ಪ್ರತಿ ಜಿಲ್ಲೆಯಿಂದ ಬಂದ ಎಲ್ಲಾ ಪ್ರತಿನಿಧಿಗಳೂ ತಮ್ಮ ತಮ್ಮ ಜಿಲ್ಲೆಯಲ್ಲಿನ ಆಗುಹೋಗುಗಳನ್ನು ಪ್ರಸ್ತಾಪಿಸುವುದು, ನಂತರ ಪ್ರಮುಖ ಅಂಶಗಳನ್ನು ಕುರಿತು ಪ್ರತ್ಯೇಕ ಗುಂಪುಗಳಲ್ಲಿ ಕುಳಿತು

ಚರ್ಚಿದುವುದು. ನಂತರದಲ್ಲಿ ಎಲ್ಲವನ್ನೂ ಕ್ರೂಢಿಕರಿಸಿ ಕಾರ್ಯಯೋಜನೆಯನ್ನು ರೂಪಿಸುವುದು ಎಂದು ನಿರ್ಧರಿಸಲಾಯಿತು.

ಎರಡನೇ ಅಧಿವೇಶನವನ್ನು ಶ್ರೀ. ಜಿ. ಎಲ್. ಜನಾರ್ಧನ, ಶಿವಮೊಗ್ಗ, ಇವರು ನಿರ್ವಹಿಸಿದರು. ಜಿಲ್ಲಾವಾರು ಮಾಹಿತಿ ಹಂಚಿಕೆ.

**1. ಕೊಡಗು ಜಿಲ್ಲೆ: ಶ್ರೀ ರವಿ ಚಂಗಪ್ಪ, ಕಾವೇರಿಸೇನೆ**

- ಕೊಡಗಿನ ಮುಖ್ಯ ಆಕರ್ಷಣೆಯಾದ ಅಬ್ಬಿ ಜಲಪಾತದ ದಾರಿಗೆ ಆಣೆಕಟ್ಟು ನಿರ್ಮಿಸಿ ಜಲವಿದ್ಯುತ್ ಉತ್ಪಾದಿಸುವ ಯೋಜನೆ ರೂಪಿತವಾಗಿದೆ. ಈ ಕುರಿತು ನಾವು ಅಧ್ಯಯನ ನಡೆಸಿದ್ದೇವೆ. ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್‌ನ ಲಾಭಕ್ಕಿಂತ ಅರಣ್ಯನಾಶ ಮತ್ತು ಜಲಪಾತದ ನಾಶದಿಂದ ಆಗುವ ನಷ್ಟ ಹೆಚ್ಚು, ಎಂಬ ನಿರ್ಧಾರಕ್ಕೆ ಬಂದು ಅದನ್ನು ವಿರೋಧಿಸಲು ಕಾವೇರಿ ಸೇನೆ ಸರ್ವಸಜ್ಜಿತವಾಗಿದೆ.
  ನಮ್ಮ ಚಳುವಳಿಗೆ ಬೆಂಬಲವಾಗಿ ಶ್ರೀ ಸುಂದರಲಾಲ ಬಹುಗುಣ ಹಾಗೂ ಪಾಂಡುರಂಗ ಹೆಗಡೆಯವರು ಭಾಗವಹಿಸಿದ್ದರು.
- ಕೊಡಗಿನ ಬೆಟ್ಟಗಳಲ್ಲಿ ಖನಿಜಗಳು ಹೆಚ್ಚಿರುವುದು ಪರಿಸರಕ್ಕೆ ಮಾರಕವಾಗಿದೆ. ಪ್ರಭಲ ರಾಜಕಾರಣಿಗಳು ಮತ್ತು ಸಿನಿಮಾನಟರು ಇಲ್ಲಿ ಗಣಿಗಾರಿಕೆ ನಡೆಸಲು ಮುಂದಾಗಿದ್ದಾರೆ. ಇವರ ವಿರುದ್ದದ ಚಳುವಳಿಗಳನ್ನು ಕುತಂತ್ರದಿಂದ ಮುರಿಯುತ್ತಿದ್ದಾರೆ.
- ಬರಪೊಳೆ ಯೋಜನೆಗೆ 6 ಕಿ.ಮಿ. ರಸ್ತೆ ನಿರ್ಮಾಣ ಮಾಡಲು ಅರಣ್ಯನಾಶ ಮಾಡುತ್ತಿದ್ದದನ್ನು ಹೋರಾಟ ಮಾಡಿ ನಿಲ್ಲಿಸಿದ್ದೇವೆ.
- ತಲಕಾವೇರಿಯ ತಾವೂರು ಗ್ರಾಮದಲ್ಲಿ ಅರಳುಗಲ್ಲುಗಳು ಸಿಗುತ್ತವೆ. ಇದಕ್ಕಾಗಿ ಅರಣ್ಯನಾಶ ನಡೆಯುತ್ತಿದೆ. ಇದರ ವಿರುದ್ಧ ದನಿಯೆತ್ತಲಾಗಿದೆ.
  ಒಟ್ಟಾರೆ ಕೊಡಗಿನಲ್ಲಿ ಅಭಿವೃಧ್ಧಿಯ ಹೆಸರಿನಲ್ಲಿ ಪರಿಸರ ನಾಶ ಆವ್ಯಾಹತವಾಗಿ ನಡೆಯುತ್ತಿದೆ.

2. **ಹಾಸನ ಜಿಲ್ಲೆ : ಕಿಶೋರ್ ಮತ್ತು ಬಿ.ಎಸ್. ಸುಲೈಮಾನ್, ಕೃಷ್ಣಮೂರ್ತಿ**. ಪ್ರಮುಖವಾಗಿ ಗುಂಡ್ಯ ಜಲವಿದ್ಯುತ್ ಯೋಜನೆಗೆ ಚಾಲನೆ ದೊರೆತಿದೆ. ಜನರ ಪ್ರತಿರೋಧವೂ ಪರ್ಯಾಯವಾಗಿ ನಡೆಯುತ್ತಿದೆ.

ಈ ಯೋಜನೆಯಿಂದ 431 ಹೆಕ್ಟೇರ್ ಅರಣ್ಯ ನಾಶವಾಗುತ್ತದೆ 18 ಹಳ್ಳಿಗಳು ಮುಳುಗುತ್ತವೆ. ಹಲವಾರು ಹಳ್ಳಿಗಳು ರಸ್ತೆ ಸಂಪರ್ಕ ಕಡಿದು ಕೊಳ್ಳುತ್ತವೆ. ಅಲ್ಲದೆ ಈ ಪ್ರದೇಶದಲ್ಲಿ ಆನೆಗಳು ವಾಸಿಸುತ್ತಿದ್ದು ಅವುಗಳು ತಮ್ಮ ನೆಲೆ ಮತ್ತು ದಾರಿಗಳನ್ನು ಕಳೆದುಕೊಳ್ಳುವುದರಿಂದ ಜಿಲ್ಲೆಯ ಕೃಷಿಕರಿಗೆ ಹೆಚ್ಚಿನ ತೊಂದರೆಯಾಗಲಿದೆ.

- ❖ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಕಾಮಗಾರಿಯಿಂದ ಅರಣ್ಯಕ್ಕೆ ಆಘಾತವಾಗಲಿದೆ.
- ❖ ರೈಲ್ವೆ, ರಸ್ತೆ, ಡೀಸೆಲ್ ಪೈಪ್ ಲೈನ್ ಮತ್ತು ವಿದ್ಯುತ್ ಲೈನ್‌ಗಳಿಂದ ಸಾವಿರಾರು ಎಕರೆ ಅರಣ್ಯ ನಾಶವಾಗಲಿದೆ.
- ❖ ಗಣಿಗಾರಿಕೆಗೆ ಅನುಮತಿ ಪಡೆದು ಮತ್ತು ಪಡೆಯದೆ ನಡೆಸುತ್ತಿದ್ದಾರೆ.
- ❖ ಕಿರು ಜಲವಿದ್ಯುತ್ ಯೋಜನೆ ಹೆಸರಿನಲ್ಲಿ ಸಾವಿರಾರು ಎಕರೆ ಕಾಡು ನಾಶವಾಗಲಿದೆ.
- ❖ ರೆಸಾರ್ಟಗಳು ತಲೆ ಎತ್ತುತ್ತಿವೆ.
- ❖ ಟಿಂಬರ್ ಮಾಫಿಯಾ ಹೆಚ್ಚು ಪ್ರಭಲವಾಗುತ್ತಿವೆ.
- ❖ ಕಾಡು ಮನೆ ಎಸ್ಟೆಟ್ 10000 ಎಕರೆಯಲ್ಲಿ ಟೀತೋಟ ಮಾಡಿದೆ.

ಒಟ್ಟಾರೆ ಹಾಸನ ಜಿಲ್ಲೆಯಲ್ಲಿರುವ ಪಶ್ಚಿಮ ಘಟ್ಟದ ಅರಣ್ಯ ವಿನಾಶದ ಅಂಚಿನಲ್ಲಿದೆ.

**3. ಉತ್ತರ ಕನ್ನಡ ಜಿಲ್ಲೆ : ಶ್ರೀ ಪಾಂಡುರಂಗ ಹೆಗಡೆ, ರವಿಂದ್ರ ನಾಥ, ಲಕ್ಷ್ಮೀ ಅಳಗೋಡು, ಗಣೇಶ ಶೆಟ್ಟಿ.**

- ❖ ಉತ್ತರ ಕನ್ನಡ ಜಿಲ್ಲೆಯಲ್ಲಿ ಯೋಜನೆಗಳ ಮಹಾಪೂರವೇ ಆಗಿದೆ ಹಾಗೂ ಆಗುತ್ತಲಿವೆ.
- ❖ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ 700 ಎಕರೆ ಅರಣ್ಯ ನಾಶವಾಗಿದೆ ಮತ್ತು ಬಿಸಿನೀರು ಕಾಳಿ ನದಿಗೆ ಬರುವುದರಿಂದ ನದಿಯ ನೀರು ವಿಷದ ನೀರಾಗಿ ಪರಿಣಮಿಸುತ್ತಿದೆ.
- ❖ ಸೂಪಾ ಜಲ ವಿದ್ಯುತ್ ಯೋಜನೆ ಮತ್ತು ಶರಾವತಿ ಟೇಲರೇಸ್ ಯೋಜನೆಗಳಿಂದ ಅರಣ್ಯನಾಶವಾಗಿರುವುದು ಕಣ್ಮುಂದೆ ಇದೆ.
- ❖ ಬೇಡ್ತಿ ಯೋಜನೆಯ ಪ್ರಸ್ತಾಪ ಮತ್ತೆ ಮತ್ತೆ ಬರುತ್ತಿದೆ.
- ❖ ಗಣಿಗಾರಿಕೆಗೆ ಯಲ್ಲಾಪೂರದಲ್ಲಿ ತೀವ್ರ ವಿರೋದದಿಂದ ಹಾಗೂ ಸುಪ್ರಿಂಕೋರ್ಟ ಆದೇಶದಿಂದಾಗಿ ಗಣಿಗಾರಿಕೆ ಸದ್ಯ ನಿಂತಿದೆ.
- ❖ ತದಡಿ ಉಷ್ಣ ವಿದ್ಯುತ್ ಸ್ಥಾವರ, ಅರಣ್ಯ ಮತ್ತು ಸಮುದ್ರ ಎರಡೂ ಪರಿಸರವನ್ನು ನಾಶಮಾಡಲಿದೆ.
- ❖ ಎಸ್.ಇ.ಝುಡ್ ಕಾಯ್ದೆಯನ್ನು ಉಲ್ಲಂಘಿಸಿ ಸಮುದ್ರದ ಕಿನಾರೆಯಲ್ಲಿ ತಾಜ್ ಮತ್ತು ಇತರ ಹೋಟೆಲ್‌ಗಳನ್ನು ನಿರ್ಮಾಣ ಮಾಡುವ ಹುನ್ನಾರವಿದೆ.

❖ ಹುಬ್ಬಳ್ಳಿ ಅಂಕೋಲ ರೈಲು ಯೋಜನೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ಕಾನೂನು ತೊಡಕಿನಿಂದಾಗಿ ಸದ್ಯದಲ್ಲಿ ನಿಂತಿದೆ. ಇದರ ಜಾರಿಗೆ ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಹೋರಾಡುತ್ತಿವೆ. ಇದರ ಹಿಂದೆ ಗಣಿ ದಣಿಗಳ ಥೈಲಿಯ ಬೆಂಬಲವೂ ಇದೆ.

4. **ಧಾರವಾಡ ಜಿಲ್ಲೆ : ಶ್ರೀನಿವಾಸ ಕುಲಕರ್ಣಿ**

5. **ಬೆಳಗಾವಿ ಜಿಲ್ಲೆ : ಅಮೃತ ಚರಂತಿಮಠ್**

❖ ದೂದ್‌ಸಾಗರ ತಿರುವು ಯೋಜನೆ ಎರಡೂ ರಾಜ್ಯಗಳ ಜನರಲ್ಲಿ ಆತಂಕ ಮೂಡಿಸಿದೆ.

❖ ಬೀಡು ಕಬ್ಬಿಣದ ಘಟಕ ಆರಂಭ ಮಾಡುವವರಿದ್ದಾರೆ.

❖ ಗಣಿಗಾರಿಕೆ ಇಲ್ಲಿಯೂ ನಡೆಯುತ್ತಿದೆ.

❖ ಅಭಿವೃದ್ಧಿ ಯೋಜನೆಗಳು ನಮ್ಮ ಜಿಲ್ಲೆಯಲ್ಲೂ ಬರಲಿದೆ.

❖ ಶ್ರೀ ಶಿವಾಜಿ ಕಾಗ್ಗೇಕರ್‌ರವರ ನೇತೃತ್ವದಲ್ಲಿ ಪರಿಸರ ಉಳಿಸುವ ಹೋರಾಟಗಳು ನಡೆಯುತ್ತಿವೆ.

6. **ಶಿವಮೊಗ್ಗ ಜಿಲ್ಲೆ : ಶ್ರೀ ಜನಾರ್ಧನ ಜಿ. ಎಲ್. ಪ್ರೊ॥ ಎ. ಎನ್. ಚಂದ್ರಶೇಖರ್, ಡಾ॥ ನಾಗರಾಜ, ಶ್ರೀ ರಮೇಶ್.**

❖ ಮೈನಿಂಗ್‌ನ ಭಯ ಯಾವಾಗಲು ಕಾಡುತ್ತಿದೆ.

❖ ನ್ಯಾಶನಲ್ ಪಾರ್ಕನಿಂದಾಗಿ ಜನರು ಆತಂಕದಲ್ಲಿದ್ದಾರೆ.

❖ ಶರಾವತಿ ಕೊಳ್ಳದಲ್ಲಿ ಚಿಕ್ಕ ಪುಟ್ಟ ಯೋಜನೆಗಳ ಯೋಜನೆ ನಡೆಯುತ್ತಲಿದೆ.

❖ ವರದಾ ನದಿಗೆ ಆಣೆಕಟ್ಟು ನಿರ್ಮಾಣದ ಆತಂಕವಿದೆ.

❖ ಕೊಡಚಾದ್ರಿ ರೆಸಾರ್ಟ ಬರಲಿದೆ.

❖ SEZ ನ ಅಡಿಯಲ್ಲಿ ಘನ ತ್ಯಾಜ್ಯ ವಿದ್ಯುತ್ ಉತ್ಪಾದನಾ ಘಟಕಕ್ಕೆ ಅನುಮತಿ ದೊರೆತಿದೆ. ಶಿವಮೊಗ್ಗದ 50 ಕಿ.ಮಿ. ಸುತ್ತಳತೆಯಲ್ಲಿ ದೊರೆಯುವ ಎಲ್ಲಾ ಘನ ತ್ಯಾಜ್ಯ (ಕೃಷಿ, ಅರಣ್ಯ)ವನ್ನು ನುಂಗಲಿದೆ.

❖ ತುಂಗಾ ಮೇಲ್ದಂಡೆ ಯೋಜನೆಯಿಂದ ಹಲವಾರು ಹಳ್ಳಿಗಳು ನೀರು ಪಾಲಾಗಲಿವೆ.

❖ ತಾಳಗುಪ್ಪಾ – ಕೊಂಕಣ ರೇಲ್ವೆ ಸುದ್ದಿಯಲ್ಲಿದೆ ಇದು ಸಾವಿರಾರು ಎಕರೆ ಅರಣ್ಯವನ್ನು ಕಬಳಿಸಲಿದೆ.

7. **ಚಿಕ್ಕಮಗಳೂರು ಜಿಲ್ಲೆ : ಶ್ರೀ ಜಯಣ್ಣ, ಪ್ರೋ॥ ಲೋಬೋ, ಶ್ರೀ ಜಯರಾಂ ಮಾಸ್ಟರ್,**

❖ ಕೆಮ್ಮಣ್ಣಗುಂಡಿ ಅದಿರು ಯೋಜನೆಯಿಂದ ನಾಶಮಾಡಿದ ಅರಣ್ಯವನ್ನು ಪುನಹ ಅಭಿವೃದ್ಧಿ ಮಾಡಿಲ್ಲ. ಈಗ ಈ ಅರಣ್ಯಪ್ರದೇಶ ಜನವಸತಿಯಾಗಿ ಮಾರ್ಪಾಡಾಗಿದೆ.

❖ ಅದಿರು ಪುಡಿ ಸಾಗಿಸಲು ಮುಂದಾಗಿದ್ದರೂ ಅದನ್ನು ಏಕವ್ಯಕ್ತಿ ಹೋರಾಟದಲ್ಲಿ ನಿಲ್ಲಿಸಲಾಗಿದೆ. ಮುಂದಿನ ಹೋರಾಟಕ್ಕೆ ಬೆಂಬಲ ಬೇಕು.

❖ ಕೆಮ್ಮಣ್ಣು ಗುಂಡಿ ಪ್ರದೇಶವನ್ನು ಅರಣ್ಯ ಇಲಾಖೆ ತನ್ನ ಸ್ವಾಧೀನಕ್ಕೆ ಪಡೆಯಲು ಅಭಿವೃದ್ಧಿ ಪಡಿಸಬೇಕು.

❖ ಕುದುರೆಮುಖ ಯೋಜನೆ ನಿಂತಿದೆ, ಆದರೆ ಹಾಳಾಗಿರುವ ಜಾಗವನ್ನು ಅಭಿವೃದ್ದಿ ಪಡಿಸದಿದ್ದಲ್ಲಿ ಬದ್ರಾ ಆಣೆಕಟ್ಟು ಹೂಳಿನಿಂದ ತುಂಬಿ ಹೋಗುತ್ತದೆ.

❖ ಕುದುರೆಮುಖ ಕಂಪನಿಯ ಕಟ್ಟಡಗಳನ್ನು ಬಳಸಿಕೊಂಡು ಅರಣ್ಯ ಸಂಶೋಧನಾ ಕೇಂದ್ರವನ್ನು ಆರಂಭಿಸಬೇಕು.

❖ ಬದ್ರಾ ಮೇಲ್ದಂಡೆ ಯೋಜನೆ ಮಲೆನಾಡಿನ ಮೇಲೆ ತೂಗು ಕತ್ತಿಯಂತೆ ನಿಂತಿದೆ.

❖ ಅಲ್ಲದೆ ಬಯಲು ಸೀಮೆ ಮತ್ತು ಮಲೆನಾಡು ಜನರ ನಡುವೆ ವೈಮನಸ್ಸಿಗೆ ಕಾರಣವಾಗಿದೆ.

8. **ದಾರವಾಡ ಜಿಲ್ಲೆ : ಶ್ರೀನಿವಾಸ ಕುಲಕರ್ಣಿ**

❖ ದಾರವಾಡ ಜಿಲ್ಲೆ ಪೂರಾ ಬಯಲು ಸೀಮೆಯಾಗುತ್ತಿದೆ.

❖ ಹುಬ್ಬಳ್ಳಿ ರಾಜ್ಯದ ಎರಡನೇ ದೊಡ್ಡ ನಗರವಾಗುತ್ತಿರುವುದರಿಂದ ಇಲ್ಲಿನ ಕಾಡು, ಮಣ್ಣು, ಗಾಳಿ ಮತ್ತು ನೀರಿನ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಲಿದೆ.

❖ ಕೃಷಿಗಾಗಿ ಅರಣ್ಯ ಪ್ರದೇಶದ ಒತ್ತುವರಿ ನಡೆಯುತ್ತಿದೆ.

9. **ತೂಮಕೂರು ಜಿಲ್ಲೆ : ಮುರಳಿಧರ.**

❖ ಮ್ಯಾಂಗನೀಸ್ ಅದಿರು ಗಣಿಗಾರಿಕೆ ವಿಸ್ತರಣೆ

❖ ಕೃಷಿ ಭೂಮಿಯಲ್ಲಿ ಮರಳು ಗಣಿಗಾರಿಕೆ

ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿಯಿಂದ ಪ್ರತಿ ನಿಧಿಗಳು ಪತ್ರಗಳನ್ನು ಕಳುಹಿಸಿ ತಾವು ಭಾಗವಹಿಸಲು ಆಗದಿದ್ದಕ್ಕೆ ವಿಷಾದ ಸೂಚಿಸಿ ಮುಂದಿನ ಸಭೆಗಳಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದರು.

**ಜಿಲ್ಲಾವಾರು ಪರಿಸ್ಥಿತಿಯ ಕುರಿತು ವಿಷಯ ಹಂಚಿಕೆ**

**28ನೇ ತಾರೀಕು ಸಂಜೆಯವರೆಗೂ ನಡೆಯಿತು**

**29/5/08**

ಬೆಳಗಿನ ಸಭೆಯಲ್ಲಿ ಒಟ್ಟಾರೆ ಪ.ಘ.ದಲ್ಲಿನ ಪ್ರಮುಖ ಸಮಸ್ಯೆಗಳು ಯಾವುವು ಎಂಬುದನ್ನು ಗುರುತಿಸಿ ಕೊಳ್ಳಲಾಯಿತು. ಅವುಗಳೆಂದರೆ :

1. ಗಣಿಗಾರಿಕೆ
2. ನದಿಗಳು (ನೆಲಜಲ)
3. ಅರಣ್ಯ
4. ಜನಜಾಗೃತಿ

ಮೇಲೆ ತಿಳಿಸಿದ ನಾಲ್ಕು ವಿಷಯಗಳನ್ನು ಪ್ರತ್ಯೇಕ ಗುಂಪುಗಳಲ್ಲಿ ಕುಳಿತು ಚರ್ಚಿಸುವುದು ನಂತರ ದೊಡ್ಡ ಗುಂಪಿನಲ್ಲಿ ಮಂಡಿಸುವುದು ಎಂದು ನಿರ್ಧರಿಸಲಾಯಿತು. ಒಟ್ಟು ಸಭೆಯಲ್ಲಿ ಹಾಜರಿದ್ದವರನ್ನು ಅವರವರ ಆಸಕ್ತಿಯ ಆಧಾರದಲ್ಲಿ ನಾಲ್ಕು ವಿಷಯಗಳ ಗುಂಪುಗಳನ್ನು ಮಾಡಿ ಚರ್ಚೆಗೆ ಅನುವು ಮಾಡಿಕೊಡಲಾಯಿತು.

**1. ಗಣಿಗಾರಿಕೆ ಗುಂಪು**

**ಭಾಗವಹಿಸಿದವರು :**

1. ಡಾ॥ ನಾಗರಾಜ ಪರಿಸರ
2. ಅಮೃತ ಚರಂತಿ ಮಠ
3. ಮುರಳಿಧರ ಗು.ಲ.
4. ಶ್ರೀ ಜಯರಾಂ ಮಾಸ್ಟರ್
5. ಪವಿತ್ರಾ . ಎನ್.
6. ಶ್ರೀಮತಿ ಸರೋಜಾ
7. ಶ್ರೀಮತಿ ಚೆನ್ನಬಸಮ್ಮ
8. ಶ್ರೀ ಜನಾರ್ಧನ.ಜಿ.ಎಲ್.

**ಮೂಡಿಬಂದ ಅಂಶಗಳು :**

1. ವಿಶ್ವದಲ್ಲಿ ಗುರುತಿಸಲ್ಪಟ್ಟ ಜೀವ ವೈವಿಧ್ಯತೆಯ ತಾಣವಾದ ಪ.ಘ. ಭಾಗದಲ್ಲಿ ಯಾವುದೇ ಗಣಿಗಾರಿಕೆ ಚಟುವಟಿಕೆ ಅವಕಾಶ ನೀಡಬಾರದು.
2. ಖಾಸಗಿ ಒಡೆತನದಲ್ಲಿರುವ ಭೂಮಿಯಿಂದ 3 ಅಡಿ ಕೆಳಭಾಗದಲ್ಲಿರುವ ಸ್ವಾಭಾವಿಕ ಸಂಪನ್ಮೂಲಗಳು ರಾಷ್ಟ್ರೀಯ ಸಂಪತ್ತಾಗ ಬೇಕೆ ಹೊರತು, ಇದು ಖಾಸಗಿ ಸಂಪತ್ತಾಗಬಾರದು.

3. ನಮ್ಮ ರಾಷ್ಟ್ರದಲ್ಲಿ ದೊರೆಯುವ ನೈಸರ್ಗಿಕ ಸಂಪತ್ತಿನಲ್ಲಿ ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಆದ್ಯತೆಯ ಮೇರೆಗೆ ಬಳಸಿಕೊಳ್ಳ ಬೇಕು.

4. ಪ.ಘ. ಪ್ರದೇಶದಲ್ಲಿ ಕೈಗಾರಿಕೆ, ಗಣಿಗಾರಿಕೆ, ರೆಸಾರ್ಟಗಳನ್ನು ಮಾಡಲು ಅನುಮತಿ ಕೊಡಬಾರದು.

5. ಈಗಾಗಲೆ ಪ.ಘ. ಪ್ರದೇಶದಲ್ಲಿ ಗಣಿಗಾರಿಕೆ, ಕಾರ್ಖಾನೆ, ರೇಸಾರ್ಟಗಳು ನಡೆಸುತ್ತಿದ್ದರೆ ನೆಲಸಮ ಮಾಡಿ ಅಲ್ಲಿ ಅರಣ್ಯವನ್ನು ಅಭಿವೃದ್ಧಿ ಪಡಿಸಬೇಕು.

6. ಸ್ಥಳೀಯರು ತಮ್ಮ ಸುತ್ತ ಮುತ್ತ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳಾದ ಗಣಿಗಾರಿಕೆ, ಅರಣ್ಯನಾಶ, ವನ್ಯ ಜೀವಿಗಳ ಬೇಟೆ, ಅರಣ್ಯ ಒತ್ತುವರಿ, ಇಂತಹವುಗಳನ್ನು ವಿರೋಧಿಸುವ ಮೂಲಕ ನೈಸರ್ಗಿಕ ಸಂಪತ್ತನ್ನು ರಕ್ಷಿಸುವಲ್ಲಿ ಮುಂದಾದಾಗ ಇಂತಹವರಿಗೆ ಅಧಿಕಾರಿ ವರ್ಗ ಸಹಕಾರ ನೀಡಬೇಕು.

**1. ಗುಂಪು ಅರಣ್ಯ**

**ಭಾಗವಹಿಸಿದವರು :**

1. ಶ್ರೀ ಜಯಣ್ಣಾ
2. ಶ್ರೀ ರೂಪಾನಾಯಕ
3. ಶ್ರೀ ನಾಗರಾಜ
4. ಶ್ರೀ ಪಾದರ್ ಲೊಭೋ
5. ಶ್ರೀ ಗಣೇಶ ಶೆಟ್ಟಿ
6. ಶ್ರೀ ಕಿಶೋರ ಕುಮಾರ
7. ಶ್ರೀ ಸಿ. ರಮೇಶ
8. ಶ್ರೀಮತಿ ಲಕ್ಷ್ಮೀ
9. ಶ್ರೀಮತಿ ದೀಪಿಕಾ
10. ಶ್ರೀಮತಿ ಜ್ಯೋತಿ

**ಮಂಡಿಸಿದ ವಿಷಯಗಳು**

1. ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಯಾವುದೇ ಹೊಸ ಯೋಜನೆಗಳನ್ನು ಪ.ಘ. ನೈಸರ್ಗಿಕ ಅರಣ್ಯದ ವ್ಯಾಪಿಯಲ್ಲಿ ಅನುಷ್ಠಾನಗೊಳಿಸಬಾರದು. ಅಳಿದುಳಿದಿರುವ ಅತ್ಯಲ್ಪ ನೈಸರ್ಗಿಕ ಅರಣ್ಯವನ್ನು ಈಗಿನ ಸ್ಥಿತಿಯಲ್ಲಿಯೇ ಉಳಿಸಿ ಕೊಳ್ಳಬೇಕು.
2. ಪ.ಘ. ವ್ಯಾಪ್ತಿಯಲ್ಲಿ ಕೈಗಾರಿಕಾ ಅರಣ್ಯವನ್ನು ಬೆಳೆಸಲು ಅನುಮತಿ ಕೊಡಬಾರದು. ಅರಣ್ಯ ಅಭಿವೃದ್ಧಿಗೆ ಸ್ಥಳೀಯ ಜೀವ ವೈವಿದ್ಯೆತಯ ಆದಾರದಲ್ಲಿ ಸಸಿಗಳನ್ನು ನೆಡಬೇಕು.
3. ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆ ಸಮಾನ ಅಧಿಕಾರದೊಂದಿಗೆ ಯೋಜನೆಯನ್ನು ಜಾರಿಗೊಳಿಸಬೇಕು.
4. ಅಸಂಪ್ರದಾಯಕ ಇಂದನ ಮೂಲಗಳಿಗೆ ಆದ್ಯತೆ ಮತ್ತು ಸಹಾಯಧನ ನೀಡುವ ಮೂಲಕ ಅರಣ್ಯದ ಮೇಲಿನ ಒತ್ತಡವನ್ನು ಕಡಿಮೆ ಗೊಳಿಸಬೇಕು.

5. ಆದಿವಾಸಿಗಳನ್ನು ಅರಣ್ಯದಿಂದ ಒಕ್ಕಲೆಬ್ಬಿಸಬಾರದು ಅವರನ್ನು ಅರಣ್ಯ ರಕ್ಷಕರಂತೆ ಗೌರವಿಸಬೇಕು.

6. ಭೂರಹಿತ ಕೃಷಿ ಕಾರ್ಮಿಕರು ಮತ್ತು ಚಿಕ್ಕ ಹಿಡುವಳಿದಾರರು ಮಾಡಿರುವ ಒತ್ತುವರಿಯನ್ನು ಸಕ್ರಮಗೊಳಿಸಬೇಕು.

**1. ಗುಂಪು: ನೆಲಜಲ**

**ಭಾಗವಹಿಸಿದವರು:**

1. ಶ್ರೀ ಶ್ರೀಧರ ದೇಸಾಯಿ
2. ಶ್ರೀಮತಿ ವಿನೋದಾ
3. ಶ್ರೀಮತಿ ಪುಷ್ಪಾ
4. ಶ್ರೀ ಹೇಮಂತ ನಾಯ್ಕ
5. ಶ್ರೀ ರವಿ ಚಂಗಪ್ಪ
6. ಶ್ರೀಮತಿ ವಿಶಾಲಾಕ್ಷಿ
7. ಶ್ರೀ ಯುಗಂದರ್
8. ಶ್ರೀ ಶ್ರೀಪಾದ ಹೆಗಡೆ
9. ಶ್ರೀಮತಿ ಸುವರ್ಣ
10. ಶ್ರೀಮತಿ ಯಶೋದಾ
11. ಶ್ರೀ ಶ್ರೀಪಾದ ಭಟ್ಟ
12. ಶ್ರೀಮತಿ ಸುಶೀಲ
13. ಶ್ರೀ ನಿರಂಜನ
14. ಶ್ರೀ ರವೀಂದ್ರ ಶೆಟ್ಟಿ

**ಮಂಡಿಸಿದ ವಿಷಯಗಳು :**

1. ಪ.ಘ. ದಲ್ಲಿ ವ್ಯಾಪ್ತಿಯಲ್ಲಿ ನೆಲ, ಜಲ, ಅರಣ್ಯಕ್ಕೆ ಪೂರಕವಾದ ಯಾವುದೇ ಅಭಿವೃದ್ದಿ ಯೋಜನೆಯನ್ನು ಅನುಷ್ಠಾನ ಗೊಳಿಸಬಾರದು.
2. ಅಸಂಪ್ರದಾಯಕ ಇಂಧನ ಮೂಲಗಳನ್ನು ಅಭಿವೃದ್ದಿ ಪಡಿಸಬೇಕು ಮತ್ತು ಉಚಿತವಾಗಿ ಜನರಿಗೆ ಪೂರೈಸಬೇಕು. (ಸೌರ ಶಕ್ತಿ, ಗಾಳಿ ಶಕ್ತಿ, ಗೋಬರ್ ಗ್ಯಾಸ್, ಅಸ್ತ್ರ ಒಲೆ, ಮುಂತಾದವು)
3. ನದಿಗಳ ಸಂರಕ್ಷಣೆಗಾಗಿ ಕೆರೆಗಳು ಮತ್ತು ಕಟ್ಟೆಗಳನ್ನು ಅಭಿವೃದ್ಧಿಪಡಿಸ ಬೇಕು.
4. ಪ.ಘ. ದ ಯಾವುದೇ ಭಾಗವನ್ನು ಕೈಗಾರಿಕಾ ಅರಣ್ಯ ಬೆಳೆಸಲು ಗುತ್ತಿಗೆ / ಪರವಾನಗಿ ನೀಡಕೂಡದು.
5. ಸಾವಯವ ಕೃಷಿಗೆ ಒತ್ತು ನೀಡಬೇಕು. ರೈತರು ಖಾಸಗಿ ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡಬೇಕು.
6. ವಿದೇಶಿ ಬಂಡವಾಳಗಾರರಿಗೆ ನೇರವಾಗಿ ಪ.ಘ. ಪ್ರದೇಶದಲ್ಲಿ ಯಾವುದೇ ಖಾಸಗಿ ಚಟುವಟಿಕೆಗೆ ಅನುಮತಿ ನೀಡಕೂಡದು.
7. ಕೃಷಿ ಮತ್ತು ಅರಣ್ಯ ಭೂಮಿಯನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸುವುದನ್ನು ನಿಷೇದಿಸ ಬೇಕು.
8. ಮಣ್ಣು, ನೀರು, ಕಾಡು, ಗಾಳಿ ಇವುಗಳನ್ನು ಸಮುದಾಯದ ಸ್ವತ್ತು ಎಂದು ಘೋಷಿಸಿ ಖಾಸಗಿಕರಣವನ್ನು ತಡೆಯಬೇಕು.

2. **ಗುಂಪು: ಜನಜಾಗೃತಿ**
3. **ಭಾಗವಹಿಸಿದವರು :**

1. ಶ್ರೀ ಎ. ಎಸ್. ಚಂದ್ರಶೇಖರ್
2. ಶ್ರೀ ಕೃಷ್ಣಮೂರ್ತಿ
4. ಶ್ರೀಮತಿ ವಿಶಾಲ
5. ಶ್ರೀಮತಿ ನೇತ್ರಾ
6. ಶ್ರೀಮತಿ ಪುಷ್ಪಾ
7. ಶ್ರೀ ಹೆಚ್ ಅಣ್ಣಪ್ಪ
8. ಶ್ರೀ ಈಶ್ವರ ಮೂರ್ತಿ
9. ಶ್ರೀಮತಿ ವನಜಾಕ್ಷಿ
10. ಶ್ರೀಮತಿ ತುಂಗಮ್ಮಾ
11. ಶ್ರೀಮತಿ ನಿರ್ಮಲಾ
12. ಶ್ರೀಮತಿ ಪಿ ಆರ್ ರತ್ನಮ್ಮ
13. ಶ್ರೀಮತಿ ಹೇಮಲತಾ
14. ಶ್ರೀಮತಿ ಚೆನ್ನ ಬಸಮ್ಮ
15. ಶ್ರೀ ಶ್ರೀನಿವಾಸ ಕುಲಕರ್ಣಿ

**ಮಂಡಿಸಿದ ವಿಷಯ :**

1. ಶಾಲಾ ಪಠ್ಯ ಕ್ರಮದಲ್ಲಿ ಪ.ಘ.ದ ಕುರಿತು ಒಂದು ಅಧ್ಯಾಯವನ್ನು ಸೇರಿಸಬೇಕು.
2. ರಾಜ್ಯದ ಎಲ್ಲಾ ಶಾಲೆ ಮತ್ತು ಕಾಲೇಜುಗಳಲ್ಲಿ ಪರಿಸರ ಸಂಘ (ಇಕೋ ಕ್ಲಬ್)ಗಳನ್ನು ಕಡ್ಡಾಯವಾಗಿ ಆರಂಭಿಸಬೇಕು ಮತ್ತು ಗಿಡನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕು.
3. ಪ.ಘ.ದ ಕುರಿತು ಇದರ ಮಹತ್ವ ಮತ್ತು ಇದರ ಸ್ಥಿತಿಗತಿ ಕುರಿತು ಮಾಹಿತಿ ಪತ್ರಗಳನ್ನು ಪ್ರಕಟಿಸಬೇಕು.
4. ಪ್ರಸಾರ ಮಾಧ್ಯಮಗಳು ಹಾಗೂ ಕಲಾ ಮಾದ್ಯಮಗಳ ಮೂಲಕ ಸಹ ಪರಿಸರದ ಕುರಿತು ಪ್ರಚಾರ ಕೈಗೊಳ್ಳಬೇಕು.
5. ಗ್ರಾಮ ಮಟ್ಟ ಮತ್ತು ವಾರ್ಡ ತಾಲೂಕುಮಟ್ಟ ಜಿಲ್ಲಾ ಪರಿಸರ ಸಮಿತಿಗಳನ್ನು ರಚಿಸಬೇಕು. ಯಾವುದೇ ಹೊಸ ಯೋಜನೆಗಳನ್ನು ಆರಂಭಿಸುವ ಮುನ್ನ ಈ ಸಮಿತಿಯ ಒಪ್ಪಿಗೆ ಪಡೆದಿರಬೇಕು.
6. ಸ್ವ ಸಹಾಯ, ಸ್ತ್ರೀ ಶಕ್ತಿ ಗುಂಪುಗಳಿಗೆ ಹಾಗೂ ಯುವಮಂಡಳಗಳು ಮತ್ತು ದಾರ್ಮಿಕ ಸಂಘ ಸಂಸ್ಥೆಗಳಿಗೆ ಪರಿಸರ ಜಾಗೃತಿ ಮತ್ತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
7. ಧಾರ್ಮಿಕ ಮುಖಂಡರು ಹಾಗೂ ಸಂಸ್ಥೆಗಳ ಮೂಲಕ ಪರಿಸರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.
8. ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯ ಎಲ್ಲಾ ಹಂತಗಳಲ್ಲೂ ನಡೆಯುವ ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ, ಕಾರ್ಯಕ್ರಮಗಳಲ್ಲಿ ಪರಿಸರದ ಕುರಿತು ಅರಿವು ನೀಡುವುದು.

**ಕೆಮ್ಮಣ್ಣು ಗುಂಡಿ ಘೋಷಣೆ**

- ಗುಂಡ್ಯ ಜಲವಿದ್ಯುತ್ ಯೋಜನೆ
- ತದಡಿ ಉಷ್ಣ ವಿದ್ಯುತ್ ಸ್ಥಾವರ
- ಕಿರು ಜಲವಿದ್ಯುತ್ ಯೋಜನೆಗಳಿಂದ ಆಗಲಿರುವ ಅಪಾಯಗಳು
- ಗಣಿಗಾರಿಕೆ
- ಜಪಾನ ನೆರವಿನ ಅರಣ್ಯೀಕರಣ ಯೋಜನೆ
- ಚಾಮಲಾಪುರ ಉಷ್ಣ ಸ್ಥಾವರ
- ನಿರಂತರವಾಗಿ ಮುಂದುವರಿದಿರುವ ಅರಣ್ಯಲೂಟಿ/ನಾಶ

ಅಂತಿಮವಾಗಿ ರಾಜ್ಯಮಟ್ಟದಲ್ಲಿ "ಪಶ್ಚಿಮ ಘಟ್ಟ ಉಳಿಸಿ" ಚಾಲನಾ ಸಮಿತಿಯನ್ನು ರಚಿಸಲಾಯಿತು. ಚಾಲನಾ ಸಮಿತಿಯ ಸಂಚಾಲಕರು ಶ್ರೀ ಪಾಂಡುರಂಗ ಹೆಗಡೆ

ಸದಸ್ಯರು

1

2

3

4

5

ಚಾಲನಾ ಸಮಿತಿ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸುವ ನಿರ್ಣಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಭಾಗವಹಿಸಿದ ಸದಸ್ಯರ ಪಟ್ಟಿ.

# ಪಶ್ಚಿಮ ಘಟ್ಟ ಉಳಿಸಿ ಕಾರ್ಯಾಗಾರ

## ಮೌಲ್ಯಮಾಪನ

ಈ ಕಾರ್ಯಾಗಾರದಲ್ಲಿ ತಾವು ಸಕ್ರಿಯವಾಗಿ ಭಾಗವಹಿಸಿ, ತಮ್ಮ ಅಮೂಲ್ಯ ಸಲಹೆ/ಸೂಚನೆಗಳನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ಈ ಕಾರ್ಯಾಗಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ದಯವಿಟ್ಟು ತಿಳಿಸಿ. ಪ್ರತಿಯೊಂದು ವಿಷಯದ ಮುಂದೆ (✓) ಗುರುತನ್ನು ಮಾಡಬೇಕಾಗಿ ವಿನಂತಿ.

| | ವಿಷಯ | ಉತ್ತಮ | ಸಾಧಾರಣ | ಚೆನ್ನಾಗಿಲ್ಲ |
|---|---|---|---|---|
| 1. | ಪ್ರಸ್ತಾವನೆ/ವಿಷಯ ಮಂಡನೆ | 49 | 1 | |
| 2. | ಅನುಭವ ಹಂಚಿಕೆ | 46 | 4 | |
| 3. | ಪಶ್ಚಿಮ ಘಟ್ಟದ ಸಮಸ್ಯೆಗಳು | 33 | 17. | |
| 4. | ಗುಂಪು ಚರ್ಚೆ | 45 | 5 | |
| 5. | ಕಾರ್ಯ ಯೋಜನೆ | 44 | 6 | |
| 6. | ಉಳಿಯುವ ವ್ಯವಸ್ಥೆ | 47 | 2. | |
| 7. | ಊಟ, ತಿಂಡಿ ವ್ಯವಸ್ಥೆ | 49 | 1. | |
| 8. | ವಾಹನದ ವ್ಯವಸ್ಥೆ | 24 | 24 | 2 |

ಈ ಕಾರ್ಯಾಗಾರಕ್ಕೆ ಬರುವ ಮುಂಚೆ ತಾವು ಊಹಿಸಿದಂತೆ ವಿಷಯಗಳ ಚರ್ಚೆ ನಡೆದು ಪಶ್ಚಿಮ ಘಟ್ಟದಲ್ಲಿನ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚಿಂತನ, ಮನನ ನಡೆಯಿತೆ? ಪ್ರತಿ ವರ್ಷ ನಾವು ಈ ಕಾರ್ಯಾಗಾರವನ್ನು ಮಾಡಿ ಪಶ್ಚಿಮ ಘಟ್ಟದ ಸ್ಥಿತಿಗತಿಯ ಬಗ್ಗೆ ಸಂಘಟಿತರಾಗಿ ಚಿಂತಿಸೋಣವೆ?

ನಿಮ್ಮ ಅನಿಸಿಕೆ ತಿಳಿಸಿ.

ಹೆಸರು (ಐಚ್ಛಿಕ)

# ಪರಿಸರ ಸಂರಕ್ಷಣಾ ಕೇಂದ್ರ

**ಬಸವರಾಜ ನಿಲಯ ಚೌಕಿಮಠ ಶಿರಸಿ, (ಉತ್ತರ ಕನ್ನಡ)೫೮೧೪೦೧**

**Ph : 08384 225139M: 9448818099**

**Email : appiko@gmail.com & appiko@sancharnet.in**


ಗೆ

## ಪಶ್ಚಿಮ ಘಟ್ಟ ಉಳಿಸಿ ಕಾರ್ಯಾಗಾರ

ಪಶ್ಚಿಮ ಘಟ್ಟದಲ್ಲಿನ ಅರಣ್ಯ ಪ್ರದೇಶ ವಿಶ್ವದಲ್ಲಿ ಹೆಸರು ವಾಸಿಯಾಗಿದೆ. ತಮಿಳುನಾಡು, ಕೇರಳ,ಕರ್ನಾಟಕ, ಗೋವಾ, ಹಾಗೂ ಮಹಾರಾಷ್ಟ್ರದ ರಾಜ್ಯಗಳಲ್ಲಿ ಹಬ್ಬಿರುವ ಈ ಸಹ್ಯಾದ್ರಿ ಪ್ರದೇಶದಲ್ಲಿ ಪಶ್ಚಿಮ ಘಟ್ಟ ಉಳಿಸಿ ಅಭಿಯಾನ ನಡೆದು ೨೦ ವರ್ಷಗಳಾಗಿವೆ. ಈ ಅಭಿಯಾನದ ಪ್ರಭಾವದಿಂದ ಹಲವಾರು ಕಡೆ ಹಸಿರನ್ನು ಉಳಿಸುವ ಜನಪರ ಹೋರಾಟಗಳು, ಸಂಘಟನೆಗಳು ಹಾಗೂ ವೈಯಕ್ತಿಕ ಪ್ರಯತ್ನಗಳು ಹುಟ್ಟಿಕೊಂಡಿವೆ. ಇದರಿಂದಾಗಿ ಮಲೆನಾಡಿನಲ್ಲಿ ಹಲವೆಡೆ ನಿಸರ್ಗ ಸಂಪತ್ತು ಉಳಿದುಕೊಂಡಿದೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಅರಣ್ಯಗಳ ಮೇಲಿನ ಒತ್ತಡ ಹೆಚ್ಚುತ್ತಿದ್ದು ಅವುಗಳು ಬರಡಾಗುತ್ತಿವೆ. ಒಂದೆಡೆ ಸರಕಾರದ ವಿವಿಧ ಅಭಿವೃದ್ಧಿ ಯೋಜನೆಗಳು ಈ ಕಾಡನ್ನು ಬಲಿ ತೆಗೆದುಕೊಂಡರೆ, ಇನ್ನೊಂದೆಡೆ ಬೆಳೆಯುತ್ತಿರುವ ಜನಸಂಖ್ಯೆಯ ಒತ್ತಡದಿಂದ ಇದ್ದ ಅರಣ್ಯವೂ ಬೆಂಗಾಡಾಗುತ್ತಿದೆ. ಈ ಹಿಂದೆ ನಿಸರ್ಗ ಸಂಪತ್ತಿನ ಲೂಟಿಯಲ್ಲಿ ಹೊರಗಿನವರೇ ಹೆಚ್ಚಿದ್ದರು, ಆದರೆ ಇಂದು ಸ್ಥಳಿಯರೇ ಈ ಲೂಟಿಯಲ್ಲಿ ಆಸಕ್ತರಾಗಿರುವದರಿಂದ ಸಂಪತ್ತನ್ನು ರಕ್ಷಿಸುವದು ಇನ್ನೂ ಕಠಿಣವಾಗಿದೆ.

ಮಲೆನಾಡು ಬಯಲಾಗುತ್ತಿರುವ ಬಗ್ಗೆ ನಾವು ಏನಾದರೂ ಮಾಡಲು ಸಾಧ್ಯವೆ? ಜನಪರಹೋರಾಟಗಳು ನಡೆದರೂ ಸಹ ಅರಣ್ಯನಾಶ ಯಾಕೆ ನಿಂತಿಲ್ಲ? ಈ ವಿಷಯದ ಕುರಿತು ಚರ್ಚಿಸಲು ನಾವು ಮಲೆನಾಡಿನ ಮಧ್ಯೆ ಇರುವ ಗಿರಿಧಾಮ ಕೆಮ್ಮಣ್ಣಗುಂಡಿಯಲ್ಲಿ ಎರಡು ದಿನದ ಕಾರ್ಯಾಗಾರವನ್ನು ಏರ್ಪಡಿಸಿದ್ದೇವೆ. ಅದರಲ್ಲಿ ತಾವೂ ಸಹ ಸಕ್ರಿಯವಾಗಿ ಭಾಗವಹಿಸುವದು ತುಂಬಾ ಮಹತ್ವದ್ದಾಗಿದೆ.

### ಕಾರ್ಯಾಗಾರದ ವಿವರ

ವಿಷಯ: *ಪಶ್ಚಿಮ ಘಟ್ಟಕ್ಕೆ ಭವಿಷ್ಯವಿದೆಯೇ?*
ಸ್ಥಳ : *ಕೆಮ್ಮಣ್ಣಗುಂಡಿ (ಚಿಕ್ಕಮಗಳೂರು) ತೋಟಗಾರಿಕಾ ಇಲಾಖೆ, ವಿಶ್ರಾಂತಿ ನಿಲಯ.*
ದಿನಾಂಕ: *೨೮, ೨೯, ಮೇ, ೨೦೦೮*

(ಪು.ತಿ.ನೋ.)

**ಕಾರ್ಯಕ್ರಮದ ಉದ್ದೇಶ:**

- ಪಶ್ಚಿಮ ಘಟ್ಟದಲ್ಲಿನ ಇಂದಿನ ಸಮಸ್ಯೆಗಳು ಈ ಕುರಿತು ಅನುಭವ ಹಂಚಿಕೆ.
- ಮಲೆನಾಡಿನಲ್ಲಿ ಬರಲಿರುವ ಅಪಾಯಕಾರಿ ಯೋಜನೆಗಳು.
- ನಾವು ಏನು ಮಾಡಬಹುದು? ಕಾರ್ಯಯೋಜನೆ.

**ಕಾರ್ಯಕ್ರಮದ ವಿವರ :**

- ಮೇ ೨೭, ೨೦೦೮ರಂದು ಸಾಯಂಕಾಲದೊಳಗೆ ಕೆಮ್ಮಣ್ಣಗುಂಡಿಗೆ ಆಗಮನ, ವಿಶ್ರಾಂತಿ.
- ಎರಡನೇ ದಿನ: ಮೇ ೨೮, ೨೦೦೮ರಂದು ಪಶ್ಚಿಮ ಘಟ್ಟದಲ್ಲಿನ ಸಮಸ್ಯೆಗಳ ಕುರಿತು ಅನುಭವ ಹಂಚಿಕೆ, ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ತಮ್ಮ ಅನುಭವವನ್ನು ಹಂಚಿಕೊಳ್ಳುವದು.
- ದಿ: ೨೯, ಮೇ, ೨೦೦೮ ಪಶ್ಚಿಮಘಟ್ಟವನ್ನು ಉಳಿಸಲು ನಾವೇನು ಮಾಡಬಹುದು? ಕಾರ್ಯಯೋಜನೆ ಸಿದ್ಧಪಡಿಸುವದು.

ಮಲೆನಾಡು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಸಂಘಟನೆಗಳು ಹಾಗೂ ಸಂಸ್ಥೆಗಳಿಗೆ ಈ ಆಮಂತ್ರಣವನ್ನು ಕಳುಹಿಸುತ್ತಿದ್ದೇವೆ.

ನಾವು ಸಂಘಟಿತರಾಗಿ ಮಲೆನಾಡಿನ ಸಂಪತ್ತನ್ನು ಉಳಿಸಿ, ಸಂರಕ್ಷಿಸುವತ್ತ ರಚನಾತ್ಮಕವಾಗಿ ಕೆಲಸಮಾಡುವ ಸಮಯ ಬಂದೊದಗಿದೆ. ಈ ಪ್ರಯತ್ನದಲ್ಲಿ ತಾವು ಭಾಗವಹಿಸಿ ಸಲಹೆ, ಸೂಚನೆಗಳನ್ನು ನೀಡಬೇಕಾಗಿ ವಿನಂತಿ.

ಕೆಮ್ಮಣ್ಣಗುಂಡಿ, ಮಲೆನಾಡಿನ ಮಧ್ಯೆ ಇರುವ ಗಿರಿಧಾಮದ, ಪ್ರಕೃತಿಯ ಮಧ್ಯೆ ನಾವು ಕಾರ್ಯಾಗಾರವನ್ನು ಏರ್ಪಡಿಸಿದ್ದೇವೆ. ಕಾರ್ಯಾಗಾರಕ್ಕೆ ಬನ್ನಿ, ತಮ್ಮ ಬಸ್ ಪ್ರಯಾಣದ ವೆಚ್ಚವನ್ನು ನಾವು ಭರಿಸುತ್ತೇವೆ (ದಯಮಾಡಿ ಪ್ರಯಾಣಿಸಿದ ಟಿಕೆಟ್ ಕಾದಿರಿಸಿಕೊಳ್ಳಿ).

**ವಿ.ಸೂ:** ತಾವು ಮೇ, ದಿನಾಂಕ ೨೭, (ಮಂಗಳವಾರ) ರಂದು ಸಂಜೆ ೪ ಘಂಟೆ ಒಳಗೆ ಲಿಂಗದಹಳ್ಳಿಯನ್ನು ತಲುಪಬೇಕಾಗಿ ನಮ್ಮ ವಿನಂತಿ. ದಿ: ೨೯ರ ಸಂಜೆ ೪ ಘಂಟೆಯ ಒಳಗಡೆ ಕಾರ್ಯಗಾರ ಮುಗಿಯಲಿದೆ.

ಕೆಮ್ಮಣ್ಣಗುಂಡಿ ತಲುಪಲು ಚಿಕ್ಕಮಗಳೂರು-ತರಿಕೆರೆ ಮಧ್ಯೆ ಇರುವ ಲಿಂಗದಹಳ್ಳಿಗೆ ಬನ್ನಿ. ಇಲ್ಲಿಂದ ಕೆಮ್ಮಣ್ಣಗುಂಡಿ ೨೦ ಕಿ.ಮಿ. ದೂರವಿದೆ ಇಲ್ಲಿಂದ ವಾಹನದ ವ್ಯವಸ್ಥೆಯನ್ನು ಮಾಡಲಾಗಿದೆ. ಲಿಂಗದ ಹಳ್ಳಿ ಬಸ್ ನಿಲ್ದಾಣದಲ್ಲಿ ನಿಮ್ಮನ್ನು ಸ್ವಾಗತಿಸಲು ಕಾರ್ಯಕರ್ತರು ಇರುತ್ತಾರೆ.

ದಯವಿಟ್ಟು ತಾವು ಬರುವ ದಿನಾಂಕ, ಸಮಯವನ್ನು ಮುಂಚಿತವಾಗಿ ತಿಳಿಸಿ. ಇದರಿಂದ ನಿಮ್ಮ ಊಟ, ವಸತಿಯ ವ್ಯವಸ್ಥೆ ಮಾಡಲು ಅನುಕೂಲವಾಗುತ್ತದೆ.

ಮೇ, ೧೦, ೨೦೦೮ — ತಮ್ಮ ವಿಶ್ವಾಸಿ,

**ಶಿರಸಿ** — **ಪಾಂಡುರಂಗ ಹೆಗಡೆ /ಅಪ್ಪಿಕೊ ಚಳುವಳಿ**